ಸಂಪುಟ 01 | ಸಂಚಿಕೆ 184 ಮಂಗಳವಾರ 08 ಸೆಪ್ಟೆಂಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ಅಂತರರಾಷ್ಟ್ರೀಯ ಸಾಕ್ಷರತಾ ದಿನ (International Literacy Day)

ಪ್ರತಿವರ್ಷ ಸೆಪ್ಟೆಂಬರ್ 8ರಂದು ಆಚರಿಸಲಾಗುತ್ತದೆ. ಎಲ್ಲರಿಗೂ ಓದು-ಬರಹದ ಶಿಕ್ಷಣದ ಮಹತ್ವವನ್ನು ತಿಳಿಸುವುದು ಇದರ ಉದ್ದೇಶ.

2) ವಿಶ್ವ ಫಿಸಿಯೋಥೆರಪಿ ದಿನ (World PT Day)

ದೈಹಿಕ ಚಲನೆ, ಆರೋಗ್ಯ ಮತ್ತು ಪುನರ್ವಸತಿಯಲ್ಲಿ ಫಿಸಿಯೋಥೆರಪಿಯ ಮಹತ್ವದ ಕುರಿತು

## ಸುಭಾಷಿತ

ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದಿಗೂ ಬೇಸರ ಎನಿಸುವುದಿಲ್ಲ.

– ಮಹಾತ್ಮ ಗಾಂಧಿ

# ಮಾಜಿ ಸಿಎಂ ಸಿದ್ದರಾಮಯ್ಯ ಆಪ್ತರ ಕಿತ್ತಾಟ, ಭುಗಿಲೆದ್ದ ಅಸಮಾಧಾನ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಹಲವು ನಾಯಕರು ಇದೀಗ ಒಂದೊಂದಾಗಿ ಅಂತರ ಕಾಯ್ದುಕೊಳ್ಳುತ್ತಿರುವ ಬೆಳವಣಿಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಸಚಿವ ಸ್ಥಾನ ಸಿಕ್ಕವರು ಹಾಗೂ ಸಿಗದವರು ತಮ್ಮದೇ ಕಾರಣಗಳಿಗೆ ಅಸಮಾಧಾನ ವ್ಯಕ್ತಪಡಿಸುತ್ತಿರುವ ನಡುವೆಯೇ, ಮಾಜಿ ಸಚಿವ ಎಚ್.ಸಿ. ಮಹದೇವಪ್ಪ ಅವರ ಹೇಳಿಕೆಗಳು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿವೆ.ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ಮಹದೇವಪ್ಪ ಅವರು ಸಿದ್ದರಾಮಯ್ಯ ಅವರನ್ನು ಹೊಗಳುತ್ತಲೇ ತಮ್ಮ ಅಸಮಾಧಾನವನ್ನು ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ.**

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಅಹಿಂದ ಸಮಾವೇಶಕ್ಕೆ ಒಂದು ಕಾಲದಲ್ಲಿ ಸಿದ್ದರಾಮಯ್ಯ ಅವರ ಆಪ್ತರಾಗಿದ್ದ ಸತೀಶ್ ಜಾರಕಿಹೊಳಿ ಹಾಗೂ ಮಹದೇವಪ್ಪ ಅವರನ್ನು ಆಹ್ವಾನಿಸದಿರುವುದು ಚರ್ಚೆಗೆ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಹದೇವಪ್ಪ, ಅಹಿಂದ ನಾಯಕತ್ವ ಸ್ವಯಂ ಘೋಷಣೆಯಿಂದ ಬರುವುದಿಲ್ಲ ಎಂದು ಪರೋಕ್ಷವಾಗಿ ಟಾಂಗ್ ನೀಡಿದರು. ಹುಬ್ಬಳ್ಳಿಯಲ್ಲಿ ನಡೆದ ಅಹಿಂದ ಸಮಾವೇಶವನ್ನು ತಾನೊಬ್ಬನೇ ನಿಂತು ರೂಪಿಸಿದ್ದೆ. ಅಹಿಂದ ನಾಯಕತ್ವ



ಎಂದರೆ ಕೇವಲ ಭಾಷಣ ಮಾಡಿ ಹೋಗುವುದಲ್ಲ. ಸಾಮಾಜಿಕ ನ್ಯಾಯ ಹಾಗೂ ಹಿಂದುಳಿದ ವರ್ಗಗಳ ಪರ ಬದ್ಧತೆಯಿಂದ ಕೆಲಸ ಮಾಡಬೇಕು. ಸಂಘಟನೆ ನಡೆಸಲು ಪ್ರಜಾಪ್ರಭುತ್ವದ ರೀತಿಯಲ್ಲಿ ನಿರ್ಣಯಗಳು ನಡೆಯಬೇಕು ಎಂದು ಹೇಳಿದರು.

"ಅಹಿಂದ ನಾಯಕ ಯಾರು ಎಂಬುದು ಭಾಷಣದಿಂದ ನಿರ್ಧಾರವಾಗುವುದಿಲ್ಲ. ಸಭೆ ಸೇರಿ ನಿರ್ಣಯ ಮಾಡಿದ ಮಾತ್ರಕ್ಕೆ ನಾಯಕತ್ವ ಸಿಗುವುದಿಲ್ಲ. ಇದು ಪ್ರಜಾಪ್ರಭುತ್ವ; ಹಾಗೆಲ್ಲ ನಡೆಯುವುದಿಲ್ಲ" ಎಂದು ಮಹದೇವಪ್ಪ ಹೇಳಿದರು.

ಕಾಂಗ್ರೆಸ್‌ನಲ್ಲಿ ಒಗ್ಗಟ್ಟಿದೆ. ನಾವೆಲ್ಲರೂ ಸರಿಯಾದ ಹಾದಿಯಲ್ಲಿದ್ದೇವೆ ಎಂದು ಹೇಳಿದ ಅವರು, ಅಹಿಂದ ಚಳವಳಿ ಒಬ್ಬರಿಂದ ಮಾತ್ರ ನಿರ್ಮಾಣವಾಗಿಲ್ಲ. ಹುಬ್ಬಳ್ಳಿಯಲ್ಲಿ ನಡೆದ ಮೊದಲ ಅಹಿಂದ ಸಮಾವೇಶದ ಸಂದರ್ಭದಲ್ಲಿ ತಾನೊಬ್ಬನೇ ಕುಳಿತು ಅದರ ರೂಪುರೇಷೆ ಸಿದ್ಧಪಡಿಸಿದ್ದೆ ಎಂದು ತಿಳಿಸಿದರು.

ಇತ್ತೀಚೆಗೆ ನಡೆದ ಅಹಿಂದ ಸಮಾವೇಶವನ್ನು ಕೇವಲ ಒಬಿಸಿ ಸಮಾವೇಶ ಎಂದು ಕರೆಯಬಾರದು. ಕೆಲವು ವರ್ಗಗಳನ್ನು ಹೊರಗಿಟ್ಟು ಸಮಾವೇಶ ನಡೆಸಲಾಗಿದೆ ಎಂಬ ಅಭಿಪ್ರಾಯ ಸರಿಯಲ್ಲ. ಅದು ಹಿಂದುಳಿದ ವರ್ಗಗಳ ಸಮಾವೇಶವಾಗಬೇಕು. ಕಾಂಗ್ರೆಸ್‌ನಿಂದ 'ಜೈ ಬಾಪು, ಜೈ ಭೀಮ್' ಕಾರ್ಯಕ್ರಮಗಳನ್ನೂ ನಡೆಸಿದ್ದೇವೆ ಎಂದು ಹೇಳಿದರು. ಸಿದ್ದರಾಮಯ್ಯ ಅವರನ್ನು ಭೇಟಿಯಾಗಿಲ್ಲ. ಅವರು ಇನ್ನು ಸಕ್ರಿಯ ರಾಜಕಾರಣದಲ್ಲಿ ಇರುವುದಿಲ್ಲ ಎಂದು ಏಕೆ ಹೇಳಿದ್ದಾರೆ ಎಂಬುದು ನನಗೆ ಗೊತ್ತಿಲ್ಲ ಎಂದರು.

"ಸಿದ್ದರಾಮಯ್ಯ ನನ್ನ ದೊಡ್ಡ ಅಣ್ಣನಂತೆ. ಇಷ್ಟು ವರ್ಷ ಅವರನ್ನು ಹಾಡಿ ಹೊಗಳಿ, ಈಗ ಬೇರೆ ಮಾತನಾಡಿದರೆ ಹೇಗೆ? ನಾನು ಅಂತಹ ಗುಂಪಿಗೆ ಸೇರಿದವನಲ್ಲ" ಎಂದು ಸ್ಪಷ್ಟಪಡಿಸಿದರು.

ಜೆಡಿಎಸ್ ಸೇರುವ ವದಂತಿಗೆ ತೆರೆ

ಮಹದೇವಪ್ಪ ಅವರು ಜೆಡಿಎಸ್ ಸೇರ್ಪಡೆಯಾಗಲಿದ್ದಾರೆ ಎಂಬ ವದಂತಿ ಕುರಿತು ತೀವ್ರವಾಗಿ ಪ್ರತಿಕ್ರಿಯಿಸಿದ ಅವರು, ತಾವು ಕಾಂಗ್ರೆಸ್ ಸಂಘಟನೆಯಲ್ಲೇ ಸಕ್ರಿಯವಾಗಿರುವುದಾಗಿ ಹೇಳಿದರು.

"ನಾನು ಕಾಂಗ್ರೆಸ್ ಸಂಘಟನೆ ಮಾಡುತ್ತಿದ್ದೇನೆ. ಜೆಡಿಎಸ್‌ಗೆ ಸೇರುತ್ತೇನೆ ಎಂದು ನಾನೇನಾದರೂ ಹೇಳಿದ್ದೇನೆಯೇ? ಅನಗತ್ಯವಾಗಿ ದಾರಿ ತಪ್ಪಿಸುವ ಪ್ರಯತ್ನ ಮಾಡಬಾರದು" ಎಂದು ಹೇಳಿದರು. ಈ ಮೂಲಕ ಕಾಂಗ್ರೆಸ್‌ನಲ್ಲೇ ತಮ್ಮ ರಾಜಕೀಯ ಚಟುವಟಿಕೆಗಳನ್ನು ಮುಂದುವರಿಸುವುದಾಗಿ ಮಹದೇವಪ್ಪ ಸ್ಪಷ್ಟ ಸಂದೇಶ ನೀಡಿದ್ದಾರೆ.

## ಕರ್ನಾಟಕ ಮುಸ್ಲಿಂ ಸಂಘ ತಾಲ್ಲೂಕಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ: ಫಯಾಜ್ ಪೀರಾ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕರ್ನಾಟಕ ಮುಸ್ಲಿಂ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ ಎಂದು ಫಯಾಜ್ ಪೀರಾ ತಿಳಿಸಿದರು. ಈ ಕುರಿತು ಹೇಳಿಕೆ ನೀಡಿರುವ ಅವರು, ವೈಯಕ್ತಿಕ ಕೆಲಸ, ಕಾರ್ಯಗಳಿಂದ ಮುಸ್ಲಿಂ ಸಂಘದ ಕಾರ್ಯ-ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಆಗುತ್ತಿಲ್ಲ.



ಈಗಾಗಲೇ ಸಂಘಟನೆಯಿಂದ ವೈಯಕ್ತಿಕವಾಗಿ ಎಲ್ಲಾ ರೀತಿಯ ಸಾಮಾಜಿಕ ಕಾರ್ಯಗಳನ್ನು ಮಾಡಿದ ತೃಪ್ತಿ ನನಗಿದೆ, ವೈಯಕ್ತಿಕ ಬದುಕಿನ ಕೆಲವು ಅಡಚಣೆಗಳಿಂದ ಮುಂದಿನ ದಿನಗಳಲ್ಲಿ ಸಂಘದಲ್ಲಿ ಸಕ್ರಿಯನಾಗಿ ಕಾರ್ಯನಿರ್ವಹಿಸದೇ ಆಗದಿರುವುದರಿಂದ ರಾಜ್ಯಾಧ್ಯಕ್ಷರಾದ ಎಲ್.ಎಸ್.ಬಷೀರ್ ಅಹ್ಮದ್ ಅವರಿಗೆ ರಾಜೀನಾಮೆ ಸಲ್ಲಿಸಿದ್ದೇನೆ ಎಂದು ಪತ್ರಿಕೆ ಹೇಳಿಕೆ ಮೂಲಕ ತಿಳಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ವರುಣದೇವನ ಕೃಪೆಗಾಗಿ ಮುಸ್ಲಿಂ ಬಾಂಧವರಿಂದ ವಿಶೇಷ ಪ್ರಾರ್ಥನೆ, ಸಾಮೂಹಿಕ ನಮಾಜ್ ಸಲ್ಲಿಕೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ರಾಜ್ಯದಲ್ಲಿ ಭೀಕರ ಬರಗಾಲದ ಛಾಯೆ ಎದ್ದು ಕಾಣಿಸಿದ್ದು, ರೈತರು ಜನ-ಜಾನುವಾರಗಳು ಮಳೆ ಬಾರದೆ, ಒಂದು ಹನಿ ನೀರಿಲ್ಲದೆ ಪರದಾಡುವ ಪರಿಸ್ಥಿತಿ ಎದುರಾಗಿದೆ. ಈ ಕಾರಣವಾಗಿ ಸಿಂಧನೂರಿನ ಎಲ್ಲಾ ಮುಸ್ಲಿಂ ಬಾಂಧವರು ಮಳೆಗಾಗಿ ಪ್ರಾರ್ಥಿಸಿ ನಮಾಜ್ ಮಾಡಿ ವರುಣ ದೇವರು ಕೃಪೆ ತೋರಲೆಂದು ನಗರದ ಈದ್ಗಾ ಮೈದಾನದಲ್ಲಿ ಶುಕ್ರವಾರ ಮುಸ್ಲಿಂ ಬಾಂಧವರು ಮಳೆಗಾಗಿ ಸಾಮೂಹಿಕವಾಗಿ ಬಹಳ ವಿಶೇಷವಾಗಿ ಪ್ರಾರ್ಥಿಸಿ, ನಮಾಜ್ ಮಾಡಿದರು.**

ನಗರದ ಬಡಿಬೇಸ್ ಮಸ್ಜಿದ್



ನಿಂದ ಮೆರವಣಿಗೆ ಮೂಲಕ ತೆರಳಿ ಈದ್ಗಾ ಮೈದಾನ ತಲುಪಿ, ಮಳೆಯ ಕೊರತೆಯಿಂದ ರೈತರು ಸೇರಿದಂತೆ ಸಾರ್ವಜನಿಕರು ಸಂಕಷ್ಟ ಅನುಭವಿಸುತ್ತಿದ್ದು, ಉತ್ತಮ ಮಳೆಯಾಗಿ ಫಸಲು ಬರಲಿ ಎಂದು ಪ್ರಾರ್ಥಿಸಿ, ವಿಶೇಷ ನಮಾಜ್? ಮಾಡಿದರು. ಉತ್ತಮ ಮಳೆಯಾಗಿ ಕೆರೆ-ಕಟ್ಟೆಗಳು ನೀರಿನಿಂದ ತುಂಬಲಿ, ರೈತರು ಸಮೃದ್ಧಿಯಾಗಿ ಬೆಳೆ ಬೆಳೆಯಲಿ, ಜನಜೀವನ ಸುಧಾರಿಸಲಿ ಹಾಗೂ ಎಲ್ಲೆಡೆ ಸುಖ-ಶಾಂತಿ ನೆಲೆಸಲಿ ಎಂದು ಪ್ರಾರ್ಥಿಸಿದರು.

ಈದ್ಗಾ ಕಮೀಟಿ ಅಧ್ಯಕ್ಷ ಸೈಯದ್ ಹಾರೂನ್ ಜಾಹಗೀರ್ ದಾರ್ ಮಾತನಾಡಿ, ಮಳೆಗಾಲ ಆರಂಭವಾಗಿ ಎರಡ್ಮೂರು ತಿಂಗಳು ಮುಗಿಯಿತ್ತಾ ಬಂದರೂ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗದೇ ಇರುವುದರಿಂದ ಕೆರೆ, ಹಳ್ಳ, ಕೊಳ್ಳಗಳು ಬತ್ತಿ ಹೋಗಿದೆ. ಜಾನುವಾರುಗಳಿಗೆ ನೀರು, ಮೇವು ದೊರಕುತ್ತಿಲ್ಲ. ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಉತ್ತಮ ಮಳೆ ಕರುಣಿಸುವಂತೆ ದೇವರನ್ನು ಪ್ರಾರ್ಥಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ: ಮೌಲಾನಾಗಳಾದ ತಾಜುಮುದ್ದೀನ್, ಮೆಹಬೂಬ್ ಮುಳ್ಳೂರು, ಗಫೂರ್ ಸಾಬ್, ಉಸಮಾ ಸಾಬ್, ಮುಖಂಡರಾದ ಜಾಫರ್ ಅಲಿ ಜಾಹಗೀರ್ ದಾರ್, ಕೆ.ಜಿಲಾನಿಪಾಷಾ, ಟಿ.ಹುಸೇನ ಸಾಬ್, ಶಪ್ಪುವುಲ್ಲಾ ಖಾನ್, ಮಹ್ಮದ್ ಸಾಬ್ ಬಡೂ, ಎಸ್.ಎಂ.ಖಾದ್ರಿ ಸಾಲಗುಂದಾ, ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಸಮಾಜದವರು ಭಾಗವಹಿಸಿ ಪ್ರಾರ್ಥಿಸಿದರು.


## ತಂಬಾಕು ಮುಕ್ತ ರಾಜ್ಯಕ್ಕಾಗಿ ಪ್ರಜ್ವಲ್ ಹಿರೇಮಠ ಸೈಕಲ್ ಜಾಗೃತಿ ಜಾಥಾ: ಜಾಲಹಳ್ಳಿಯಲ್ಲಿ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಕರ್ನಾಟಕವನ್ನು 'ತಂಬಾಕು ಮುಕ್ತ ರಾಜ್ಯ'ವನ್ನಾಗಿ ಮಾಡುವ ಉದ್ದೇಶದಿಂದ ಮುದ್ದೇಬಿಹಾಳ ತಾಲೂಕಿನ ಇಟಗಿ ಗ್ರಾಮದ ಪಿಯುಸಿ ವಿದ್ಯಾರ್ಥಿ ಪ್ರಜ್ವಲ್ ಹಿರೇಮಠ ಅವರು ಇಟಗಿಯಿಂದ ಮಂತ್ರಾಲಯದವರೆಗೆ ಸೈಕಲ್ ಜಾಗೃತಿ ಜಾಥಾ ಕೈಗೊಂಡಿದ್ದಾರೆ.**

ತಂಬಾಕು ಸೇವನೆಯಿಂದ ಉಂಟಾಗುವ ಆರೋಗ್ಯ ಹಾಗೂ ಸಾಮಾಜಿಕ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಜ್ವಲ್ ಅವರು ಸೈಕಲ್ ಮೂಲಕ ವಿವಿಧ ಗ್ರಾಮಗಳು ಹಾಗೂ ಪಟ್ಟಣಗಳಲ್ಲಿ ಸಂಚರಿಸುತ್ತಿದ್ದಾರೆ.

ಜಾಲಹಳ್ಳಿಯಿಂದ ದೇವದುರ್ಗದತ್ತ ಸೈಕಲ್‌ನಲ್ಲಿ ತೆರಳುತ್ತಿದ್ದ



ಸಂದರ್ಭದಲ್ಲಿ ರಾಜ್ಯ ಕೆಪಿಸಿಸಿ ಸಂಯೋಜಕರಾದ ವೇಣುಗೋಪಾಲಗೌಡ ಅವರು ಪ್ರಜ್ವಲ್ ಅವರನ್ನು ಭೇಟಿಯಾಗಿ, ಜಾಗೃತಿ ಜಾಥಾದ ಉದ್ದೇಶದ ಕುರಿತು ಮಾಹಿತಿ ಪಡೆದರು. ಈ ವೇಳೆ ಪ್ರಜ್ವಲ್ ಅವರು ತಂಬಾಕು ಸೇವನೆಯ ದುಷ್ಪರಿಣಾಮಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ತಮ್ಮ ಅಭಿಯಾನದ ಬಗ್ಗೆ ವಿವರಿಸಿದರು.

ಚಿಕ್ಕ ವಯಸ್ಸಿನಲ್ಲಿಯೇ ಸಮಾಜಮುಖಿ ಚಿಂತನೆಯೊಂದಿಗೆ ಇಂತಹ ಮಹತ್ವದ ಜಾಗೃತಿ ಅಭಿಯಾನ ಕೈಗೊಂಡಿರುವ ಪ್ರಜ್ವಲ್ ಹಿರೇಮಠ ಅವರ ಕಾರ್ಯವನ್ನು ವೇಣುಗೋಪಾಲಗೌಡ ಅವರು ಶ್ಲಾಘಿಸಿ, ಸನ್ಮಾನಿಸಿ, ಜಾಥಾ ಯಶಸ್ವಿಯಾಗಿ ಪೂರ್ಣಗೊಳ್ಳಲಿ ಎಂದು ಶುಭ ಹಾರೈಸಿದರು.ಈ ಸಂದರ್ಭದಲ್ಲಿ ರಾಜಶೇಖರ್ ಸ್ವಾಮಿ ಉಪಸ್ಥಿತರಿದ್ದರು

## ಮಲ್ಲಯ್ಯನ ಜಾತ್ರೆಯಲ್ಲಿ ಮುಂಜಾನೆಯಿಂದ ಭಕ್ತರ ದಂಡು

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಶ್ರಾವಣ ಮಾಸದ ಕೊನೆಯ ಸೋಮವಾರ ಮಸ್ಕಿಯ ಆರಾಧ್ಯ ದೈವ,ಎರಡನೇ ಶ್ರೀಶೈಲ ಖ್ಯಾತಿಯ ಮಲ್ಲಿಕಾರ್ಜುನ ಸ್ವಾಮಿಯ ಜಾತ್ರೆ ಹಾಗೂ ಉಚ್ಚಾಯ ಮಹೋತ್ಸವ ಭಕ್ತಿಭಾವ ಮತ್ತು ಸಂಭ್ರಮದಿಂದ ಅದ್ದೂರಿಯಾಗಿ ನಡೆಯಿತು. ಮುಂಜಾನೆಯಿಂದಲೇ ಮಲ್ಲಯ್ಯನ ದರ್ಶನಕ್ಕಾಗಿ ಬೆಟ್ಟದತ್ತ ಭಕ್ತರ ದಂಡು ಹರಿದುಬಂದಿದ್ದು, ಇಡೀ ಬೆಟ್ಟ 'ಮಲ್ಲಯ್ಯ... ಮಲ್ಲಯ್ಯ...' ಎಂಬ ನಾಮಸ್ಮರಣೆಯಿಂದ ಮೊಳಗಿತು.**

ಬೆಳಗಿನ ಜಾವ ಮೂರು ಗಂಟೆಯಿಂದಲೇ ಮಹಿಳೆಯರು, ಮಕ್ಕಳು ಸೇರಿದಂತೆ ಸಾವಿರಾರು ಭಕ್ತರು ಕಾಲ್ನಡಿಗೆಯಲ್ಲಿ ಬೆಟ್ಟ ಏರಿ ಮಲ್ಲಿಕಾರ್ಜುನ ಸ್ವಾಮಿಯ ದರ್ಶನ ಪಡೆದರು. ದೂರದ ಊರುಗಳಿಂದಲೂ ಆಗಮಿಸಿದ್ದ ಭಕ್ತರು ಮೆಟ್ಟಿಲುಗಳನ್ನು ಏರುತ್ತಾ



ಮಲ್ಲಯ್ಯನ ನಾಮಸ್ಮರಣೆ ಮಾಡುತ್ತ, ಹರಕೆ ಪ್ರಾರ್ಥನೆಗಳನ್ನು ಸಲ್ಲಿಸಿದರು.

ಮಲ್ಲಿಕಾರ್ಜುನ ಸ್ವಾಮಿಗೆ ವಿಶೇಷ ಅಭಿಷೇಕ, ಅಲಂಕಾರ ಹಾಗೂ ಪೂಜಾ ವಿಧಿವಿಧಾನಗಳು ನೆರವೇರಿದವು. ದರ್ಶನ ಪಡೆದ ಭಕ್ತರು ಪ್ರಸಾದ ಸ್ವೀಕರಿಸಿ ಕುಟುಂಬದ ಒಳಿತಿಗಾಗಿ ಪ್ರಾರ್ಥಿಸಿದರು. ಈ ವೇಳೆ ಮಲ್ಲಿಕಾರ್ಜುನ ದೇವಸ್ಥಾನದ ಅರ್ಚಕ ಸಿದ್ದಯ್ಯ ಹಿರೇಮಠ ಸೇರಿದಂತೆ ಪೂಜಾರಿ ಪೇಟೆಯ ಅರ್ಚಕರು ಹಾಗೂ ಜನಪ್ರತಿನಿದಿಗಳು,ಗಣ್ಯರು, ಸಾವಿರಾರು ಭಕ್ತರು ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ದರ್ಶನ ಪಡೆದು ಉತ್ಸವದಲ್ಲಿ ಪಾಲ್ಗೊಂಡರು.

ಭಕ್ತರ ಹೆಚ್ಚಿನ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಪೊಲೀಸ್ ಇಲಾಖೆ ಬಂದೋಬಸ್ತ್ ವ್ಯವಸ್ಥೆ ಮಾಡಿತ್ತು. ಭಕ್ತರಿಗೆ ಕುಡಿಯುವ ನೀರು ಹಾಗೂ ಪ್ರಸಾದದ ವ್ಯವಸ್ಥೆಯನ್ನೂ ಕಲ್ಪಿಸಲಾಗಿತ್ತು.

## ರಾಜ್ಯದಲ್ಲಿ 583ಕ್ಕೂ ಹೆಚ್ಚು ನಕಲಿ ವೈದ್ಯರು ಪತ್ತೆ: ಆರೋಗ್ಯ ಇಲಾಖೆ ಭರ್ಜರಿ ಕಾರ್ಯಾಚರಣೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ನಕಲಿ ಔಷಧಿಗಳ ಜಾಲದ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಆರೋಗ್ಯ ಇಲಾಖೆ ಇದೀಗ ನಕಲಿ ವೈದ್ಯರು ಹಾಗೂ ಅನಧಿಕೃತವಾಗಿ ವೈದ್ಯಕೀಯ ಸೇವೆ ನೀಡುತ್ತಿರುವವರ ವಿರುದ್ಧವೂ ಕಠಿಣ ಕ್ರಮಕ್ಕೆ ಮುಂದಾಗಿದೆ.**

ರಾಜ್ಯದಲ್ಲಿ ಎಂಬಿಬಿಎಸ್ ಸೇರಿದಂತೆ ಅಗತ್ಯ ವೈದ್ಯಕೀಯ ಪದವಿ ಹಾಗೂ ಅಧಿಕೃತ ನೋಂದಣಿ ಇಲ್ಲದೆ ಚಿಕಿತ್ಸೆ ನೀಡುತ್ತಿದ್ದ 583ಕ್ಕೂ ಹೆಚ್ಚು ನಕಲಿ ವೈದ್ಯರು ಹಾಗೂ ಅನರ್ಹ ವೈದ್ಯಕೀಯ ವೃತ್ತಿಪರರನ್ನು ಪತ್ತೆಹಚ್ಚಲಾಗಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

2024ರಿಂದ ರಾಜ್ಯಾದ್ಯಂತ ನಕಲಿ ವೈದ್ಯರು ಹಾಗೂ ಅನಧಿಕೃತವಾಗಿ ವೈದ್ಯಕೀಯ ಸೇವೆ ನೀಡುತ್ತಿರುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಅಲೋಪಥಿ, ಆಯುರ್ವೇದ, ಹೋಮಿಯೋಪಥಿ, ನ್ಯಾಚುರೋಪಥಿ ಸೇರಿದಂತೆ ವಿವಿಧ ವೈದ್ಯಕೀಯ ಪದ್ಧತಿಗಳ ಹೆಸರಿನಲ್ಲಿ ಅರ್ಹತೆ ಇಲ್ಲದೆ ಚಿಕಿತ್ಸೆ ನೀಡುತ್ತಿರುವವರ ಪಟ್ಟಿಯನ್ನು ಇಲಾಖೆ ಸಿದ್ಧಪಡಿಸಿದೆ.

ಕ್ಲಿನಿಕ್ ಸಹಾಯಕರು, ಕಂಪೌಂಡರ್‌ಗಳೇ ವೈದ್ಯರು!

ಪತ್ತೆಯಾದವರಲ್ಲಿ ಹಲವರು ಈ ಹಿಂದೆ ಕ್ಲಿನಿಕ್ ಸಹಾಯಕರು, ಲ್ಯಾಬ್ ಅಸಿಸ್ಟೆಂಟ್‌ಗಳು, ಕಂಪೌಂಡರ್‌ಗಳು ಹಾಗೂ ನರ್ಸ್‌ಗಳಾಗಿ ಕೆಲಸ ಮಾಡಿದ್ದವರು ಎನ್ನಲಾಗಿದೆ. ಅರ್ಹ ವೈದ್ಯರು ಚಿಕಿತ್ಸೆ ನೀಡುವುದನ್ನು ಗಮನಿಸಿ ಅನುಭವ ಪಡೆದ ಬಳಿಕ, ಸ್ವಂತವಾಗಿ ಅನಧಿಕೃತ ಕ್ಲಿನಿಕ್‌ಗಳನ್ನು ತೆರೆದು ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿವೆ.

ಗ್ರಾಮೀಣ ಹಾಗೂ ಉತ್ತರ ಕರ್ನಾಟಕ ಭಾಗಗಳಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿರುವುದು ಕಂಡುಬಂದಿದೆ. ಕಲಬುರಗಿ, ರಾಯಚೂರು, ಧಾರವಾಡ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅನಧಿಕೃತ ಕ್ಲಿನಿಕ್‌ಗಳ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗಿವೆ.



ಗಡಿ ಜಿಲ್ಲೆಗಳು ಹಾಗೂ ಬೆಂಗಳೂರಿನಲ್ಲೂ ಕೆಲವರು ಮೊಬೈಲ್ ಕ್ಲಿನಿಕ್ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಸ್ಥಳ ಹಾಗೂ ಮೊಬೈಲ್ ಸಂಖ್ಯೆಗಳನ್ನು ಪದೇಪದೆ ಬದಲಾಯಿಸಿಕೊಂಡು ಸಾರ್ವಜನಿಕರಿಗೆ ಚಿಕಿತ್ಸೆ ನೀಡುತ್ತಿರುವ ಪ್ರಕರಣಗಳೂ ಅಧಿಕಾರಿಗಳ ಗಮನಕ್ಕೆ ಬಂದಿವೆ ಎನ್ನಲಾಗಿದೆ.

ನಿಯಮ ಉಲ್ಲಂಘಿಸಿದರೆ ದಂಡ, ಜೈಲು

ನೋಂದಣಿ ಇಲ್ಲದೆ ವೈದ್ಯಕೀಯ ವೃತ್ತಿ ನಡೆಸುವವರ ವಿರುದ್ಧ ಸಂಬಂಧಿತ ವೈದ್ಯಕೀಯ ವೃತ್ತಿ ಕಾನೂನುಗಳು ಹಾಗೂ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ಕೆಪಿಎಂಇ) ಕಾಯ್ದೆಯಡಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಇಲಾಖೆ ಎಚ್ಚರಿಸಿದೆ. ಮೊದಲ ಬಾರಿ ನಿಯಮ ಉಲ್ಲಂಘಿಸಿದರೆ ?25 ಸಾವಿರದವರೆಗೆ ದಂಡ, ಎರಡನೇ ಬಾರಿ ತಪ್ಪು ಮಾಡಿದರೆ ?2.5 ಲಕ್ಷದವರೆಗೆ ದಂಡ ಹಾಗೂ ಒಂದು ವರ್ಷದವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ. ನಂತರವೂ ನಿಯಮ ಉಲ್ಲಂಘನೆ ಮುಂದುವರಿದರೆ ?5 ಲಕ್ಷದವರೆಗೆ ದಂಡ ಹಾಗೂ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ ಎಂದು ಇಲಾಖೆ ತಿಳಿಸಿದೆ.

ಜಿಲ್ಲಾಮಟ್ಟದಲ್ಲಿ ವಿಶೇಷ ಕಾರ್ಯಪಡೆ

ನಕಲಿ ವೈದ್ಯರು ಹಾಗೂ ಅನಧಿಕೃತ ಕ್ಲಿನಿಕ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ಆರೋಗ್ಯ ಇಲಾಖೆ ಜಿಲ್ಲಾಮಟ್ಟದಲ್ಲಿ ವಿಶೇಷ ಕಾರ್ಯಪಡೆಗಳನ್ನು ರಚಿಸಿದೆ. ಆರೋಗ್ಯ, ಪೊಲೀಸ್ ಹಾಗೂ ಔಷಧ ಆಡಳಿತ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ತಂಡಗಳು ಕ್ಲಿನಿಕ್‌ಗಳ ಪರಿಶೀಲನೆ ನಡೆಸುತ್ತಿದ್ದು, ನಿಯಮ ಉಲ್ಲಂಘಿಸಿರುವ ಸಂಸ್ಥೆಗಳನ್ನು ಮುಚ್ಚಿಸುವ ಕಾರ್ಯಾಚರಣೆಯನ್ನೂ ನಡೆಸುತ್ತಿವೆ.

ಅನಧಿಕೃತ ವೈದ್ಯಕೀಯ ಜಾಲ ಹಾಗೂ ನಕಲಿ ಔಷಧಿಗಳ ದಂಧೆಯ ನಡುವಿನ ಸಂಬಂಧದ ಕುರಿತು ತನಿಖೆ ನಡೆಸಲು ವಿಶೇಷ ತಂಡಗಳನ್ನು ನಿಯೋಜಿಸಲಾಗಿದೆ.

ವೈದ್ಯರ ನೋಂದಣಿ ಪರಿಶೀಲಿಸಿ

ಚಿಕಿತ್ಸೆ ಪಡೆಯುವ ಮುನ್ನ ವೈದ್ಯರ ನೋಂದಣಿ ಸಂಖ್ಯೆ ಹಾಗೂ ಶೈಕ್ಷಣಿಕ ಅರ್ಹತೆಯನ್ನು ಪರಿಶೀಲಿಸುವಂತೆ ಆರೋಗ್ಯ ಇಲಾಖೆ ಸಾರ್ವಜನಿಕರಿಗೆ ಸೂಚಿಸಿದೆ. ಕರ್ನಾಟಕ ವೈದ್ಯಕೀಯ ಮಂಡಳಿಯ ನೋಂದಾಯಿತ ವೈದ್ಯರ ಪಟ್ಟಿಯಲ್ಲಿ ವೈದ್ಯರ ವಿವರಗಳನ್ನು ಪರಿಶೀಲಿಸಬಹುದಾಗಿದೆ.

## ಸಾಹಿತ್ಯ ಸಿಂಚನ

### ಕಾಲದ ಹೆಜ್ಜೆಗಳ ಗುರುತು

ಕಾಲ ಸಾಗುತ್ತದೆ ನದಿಯಂತೆ,
ಕ್ಷಣಗಳು ಕರಗುತ್ತವೆ ಮರಳಿನಂತೆ;
ಹಿಂದೆ ಉಳಿಯುವ ಪ್ರತಿಯೊಂದು ಹೆಜ್ಜೆ,
ಬದುಕಿನ ಕಥೆಯೊಂದು ಹೇಳುತ್ತದೆ.

ಬಾಲ್ಯದ ನಗುವಿನ ಆ ದಿನಗಳು,
ನೆನಪಾಗಿ ಮನದಲಿ ಉಳಿದಿವೆ;
ಕಳೆದ ನೋವಿನ ಕಹಿ ಕ್ಷಣಗಳು,
ಜೀವನದ ಪಾಠವಾಗಿ ನಿಂತಿವೆ.

ಕೆಲವು ಹೆಜ್ಜೆಗಳು ಹೂವಿನ ಹಾದಿ,
ಕೆಲವು ಮುಳ್ಳಿನ ದಾರಿಯಾಯಿತು;
ಆದರೂ ಪ್ರತಿಯೊಂದು ತಿರುವಿನಲ್ಲೂ,
ನನ್ನನ್ನು ನಾನೇ ಕಂಡುಕೊಂಡೆ.

ಕಾಲ ಕಸಿದುಕೊಂಡ ಕ್ಷಣಗಳಿಗಿಂತ,
ಕೊಟ್ಟ ಪಾಠಗಳೇ ಅಮೂಲ್ಯ;
ಹಿಂದಿನ ಗುರುತುಗಳನ್ನು ನೆನಪಿಸಿಕೊಂಡು,
ಮುಂದಿನ ಹೆಜ್ಜೆ ಇಡೋಣ ಧೈರ್ಯದಿಂದ.

ನಿನ್ನೆ ಒಂದು ನೆನಪು,
ಇಂದು ಒಂದು ಅವಕಾಶ;
ನಾಳೆ ನಮ್ಮ ಕೈಯಲ್ಲಿರುವ,
ಹೊಸ ಕನಸಿನ ಆಕಾಶ.

## ಜಾಲಹಳ್ಳಿ ಶ್ರೀಮರಡಿ ದುರ್ಗಾದೇವಿ ಹೊರಟ್ಟಿ ಹನುಮಪ್ಪ ಪಲ್ಲಕ್ಕಿ ಮೆರವಣಿಗೆ: ಕೃಷ್ಣಾ ನದಿಯಲ್ಲಿ ಗಂಗಾಪೂಜೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಶ್ರಾವಣ ಮಾಸದ ಅಂಗವಾಗಿ ಜಾಲಹಳ್ಳಿ ಪಟ್ಟಣದ ಶ್ರೀ ಮರಡಿ ದುರ್ಗಾದೇವಿ ಹಾಗೂ ಶ್ರೀ ಹೊರಟ್ಟಿ ಆಂಜಿನಯ್ಯ (ಹನುಮಪ್ಪ) ದೇವಸ್ಥಾನಗಳ ವತಿಯಿಂದ ಪ್ರತಿವರ್ಷದಂತೆ ಈ ಬಾರಿಯೂ ಎರಡು ದಿನಗಳ ಧಾರ್ಮಿಕ ಕಾರ್ಯಕ್ರಮಗಳನ್ನು ಭಕ್ತಿಭಾವದಿಂದ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಅರ್ಚಕರಾದ ರಾಘವೇಂದ್ರ ಪೂಜಾರಿ ಹಾಗೂ ಹನುಮಯ್ಯ ಪೂಜಾರಿ ತಿಳಿಸಿದ್ದಾರೆ.**

ಶ್ರಾವಣ ಮಾಸದ ನಾಲ್ಕನೇ ಶುಕ್ರವಾರದಂದು ಶ್ರೀ ಮರಡಿ ದುರ್ಗಾದೇವಿ ಹಾಗೂ ಶ್ರೀ ಹೊರಟ್ಟಿ ಆಂಜಿನಯ್ಯ ದೇವರ ಮೂರ್ತಿಗಳನ್ನು ವಿಶೇಷವಾಗಿ ಅಲಂಕರಿಸಿ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಗುವುದು. ಬಳಿಕ ಡೊಳ್ಳು ವಾದ್ಯಗಳ ಮಂಗಳಧ್ವನಿಯೊಂದಿಗೆ ನೂರಾರು ಭಕ್ತರ ಸಮ್ಮುಖದಲ್ಲಿ ಜಾಲಹಳ್ಳಿಯಿಂದ ಲಿಂಗದಹಳ್ಳಿ ಗ್ರಾಮದವರೆಗೆ



ಭವ್ಯ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ.

ಶುಕ್ರವಾರ ರಾತ್ರಿ ಪಲ್ಲಕ್ಕಿಗಳು ಲಿಂಗದಹಳ್ಳಿ ಗ್ರಾಮದಲ್ಲಿ ವಾಸ್ತವ್ಯ ಹೂಡಲಿದ್ದು, ಗ್ರಾಮಸ್ಥರು ಹಾಗೂ ಭಕ್ತರಿಗಾಗಿ ಅನ್ನಪ್ರಸಾದದ ವ್ಯವಸ್ಥೆ ಮಾಡಲಾಗುತ್ತದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದು ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಕೃಷ್ಣಾ ನದಿಯಲ್ಲಿ ಗಂಗಾಪೂಜೆ ಶನಿವಾರ ಬೆಳಗ್ಗೆ ಸಂಪ್ರದಾಯದಂತೆ ಎರಡೂ ದೇವರ ಪಲ್ಲಕ್ಕಿಗಳು ಕೃಷ್ಣಾ ನದಿಗೆ ತೆರಳಲಿವೆ. ಅಲ್ಲಿ ದೇವರ ಮೂರ್ತಿಗಳಿಗೆ ಗಂಗಾಸ್ನಾನ ನೆರವೇರಿಸಿ, ಸಮೃದ್ಧ ಮಳೆ, ಉತ್ತಮ ಬೆಳೆ ಹಾಗೂ ನಾಡಿನ ಸುಭಿಕ್ಷೆಗಾಗಿ ವಿಶೇಷ ಪೂಜೆ ಹಾಗೂ ಗಂಗಾಪೂಜೆ ಸಲ್ಲಿಸಲಾಗುವುದು ಎಂದು ಹನುಮಯ್ಯ ಪೂಜಾರಿ ತಿಳಿಸಿದ್ದಾರೆ.

ನಂತರ ಡೊಳ್ಳು ವಾದ್ಯಗಳೊಂದಿಗೆ ಕೃಷ್ಣಾ ನದಿಯಿಂದ ಜಾಲಹಳ್ಳಿಯ ಶ್ರೀ ದುರ್ಗಾದೇವಿ ಹಾಗೂ ಶ್ರೀ ಆಂಜಿನಯ್ಯ ದೇವಸ್ಥಾನದವರೆಗೆ ಭವ್ಯ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ. ಮೆರವಣಿಗೆಯಲ್ಲಿ ನೂರಾರು ಭಕ್ತರು ಪಾಲ್ಗೊಂಡು ದೇವರ ನಾಮಸ್ಮರಣೆ ಮಾಡುತ್ತಾ ಭಕ್ತಿಭಾವ ಮೆರೆದರು. ಸಂಜೆ ಪಲ್ಲಕ್ಕಿಗಳು ದೇವಸ್ಥಾನಕ್ಕೆ ಆಗಮಿಸಿದ ಬಳಿಕ ದೇವರಿಗೆ ವಿಶೇಷ ಪೂಜೆ ಹಾಗೂ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ ಎಂದು ಅರ್ಚಕರು ತಿಳಿಸಿದ್ದಾರೆ.

ಭಕ್ತರಿಗೆ ಅನ್ನಪ್ರಸಾದ ಭಾನುವಾರ ಬೆಳಗ್ಗೆಯಿಂದಲೇ ಶ್ರೀ ಮರಡಿ ದುರ್ಗಾದೇವಿ ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಅನ್ನಪ್ರಸಾದ ವಿತರಣೆ ನಡೆಯಲಿದೆ. ಎರಡು ದಿನಗಳ ಧಾರ್ಮಿಕ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಲಿದ್ದಾರೆ.

## ಸಹಕಾರ ಕ್ಷೇತ್ರದಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿ: ವಿರುಪಾಕ್ಷಿ

ನೈಜ್ಯ ದೆಸೆ ನ್ಯೂಸ್

**ಸುರಪುರ: ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಯುವಜನತೆಯ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಯುವಕರು ಮತ್ತು ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಶ್ರೀ ಪ್ರಭು ಪದವಿ ಮಹಾವಿದ್ಯಾಲಯ, ಸುರಪುರದ ಪ್ರಾಂಶುಪಾಲರಾದ ವಿರುಪಾಕ್ಷಿ ಅವರು ಕರೆ ನೀಡಿದರು.**

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು; ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ಯಾದಗಿರಿ; ಸಹಕಾರ ಇಲಾಖೆ, ಯಾದಗಿರಿ ಹಾಗೂ ಶ್ರೀ ಪ್ರಭು ಪದವಿ ಮಹಾವಿದ್ಯಾಲಯ, ಸುರಪುರ ಇವರ ಸಂಯುಕ್ತ ಆಶ್ರಯದಲ್ಲಿ "ಸಹಕಾರ ಕ್ಷೇತ್ರದಲ್ಲಿ ಯುವ ಜನತೆಯ ಪಾತ್ರ" ಎಂಬ ವಿಷಯದ ಕುರಿತು ಕ್ಲಸ್ಟರ್ ತರಬೇತಿ ಕಾರ್ಯಕ್ರಮವನ್ನು ಶ್ರೀ ಪ್ರಭು ಪದವಿ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಡಾ. ಸಾಯಿಬಣ್ಣ ಮೂಡಬೋಳ, ಸಹಾಯಕ ಪ್ರಾಧ್ಯಾಪಕರು ಚಾಲನೆ ನೀಡಿ ಮಾತನಾಡಿದರು. ನಂತರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ವಿರುಪಾಕ್ಷಿ ಅವರು ಮಾತನಾಡಿ, ಇಂದಿನ ಯುವಜನತೆ ಸಹಕಾರ ಕ್ಷೇತ್ರದ ಮಹತ್ವವನ್ನು ಅರಿತುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಅಗತ್ಯವಿದೆ ಎಂದರು.

ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯುವಜನತೆಗೆ ಹೆಚ್ಚಿನ ಪ್ರಮಾಣದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಅವರಲ್ಲಿ ಸಹಕಾರ ಮನೋಭಾವ, ಆರ್ಥಿಕ ಜ್ಞಾನ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಬೇಕು. ಇಂತಹ ತರಬೇತಿ ಕಾರ್ಯಕ್ರಮಗಳಲ್ಲಿ ಯುವಕರು ಮತ್ತು ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ದೊರೆಯುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಯುವಜನತೆ ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರೆ ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗುತ್ತದೆ. ಅಲ್ಲದೆ, ಸಹಕಾರ ಕ್ಷೇತ್ರದ ಕುರಿತು ಪಡೆದ ಜ್ಞಾನವು ಮುಂದಿನ ದಿನಗಳಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಪಡೆಯಲು ಸಹಕಾರಿಯಾಗಲಿದೆ. ಆದ್ದರಿಂದ ಸ್ಥಳೀಯ ಸಹಕಾರ ಸಂಘಗಳಲ್ಲಿ ಸದಸ್ಯತ್ವವನ್ನು ಪಡೆದುಕೊಂಡು, ಸಹಕಾರ ಚಳವಳಿಯ ಭಾಗವಾಗಬೇಕು ಎಂದು ವಿರುಪಾಕ್ಷಿ ಅವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟದ ಪ್ರಭಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ಸುಜಾತ ಮಠ ಅವರು "ಸಹಕಾರ ಕ್ಷೇತ್ರದಲ್ಲಿ ಯುವಜನತೆಯ ಪಾತ್ರ" ಕುರಿತು



ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಕಾರ ಚಳವಳಿಯ ಉದ್ದೇಶ, ಮಹತ್ವ ಹಾಗೂ ಯುವಜನತೆಗೆ ಲಭ್ಯವಿರುವ ಅವಕಾಶಗಳ ಕುರಿತು ಅವರು ವಿವರಿಸಿದರು. ಇದೇ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರು, ಅತಿಥಿಗಳು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು ಮತ್ತು ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ನಿಂಗಯ್ಯ ಪೂಜಾರಿ, ರಮೇಶ್ ಶಹಪುರ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಮಲ್ಲರಾವ್ ಕುಲಕರ್ಣಿ ಅವರು ನೆರವೇರಿಸಿದರು.

ತರಬೇತಿ ಕಾರ್ಯಕ್ರಮದಲ್ಲಿ ಶ್ರೀ ಪ್ರಭು ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಸೇರಿದಂತೆ ಹಲವರು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

ಯುವಜನತೆಯನ್ನು ಸಹಕಾರ ಕ್ಷೇತ್ರದತ್ತ ಆಕರ್ಷಿಸುವುದು, ಅವ-ರಿಗೆ ಸಹಕಾರ ಚಳವಳಿಯ ಕುರಿತು ಅರಿವು ಮೂಡಿಸುವುದು ಹಾಗೂ ಭವಿಷ್ಯದಲ್ಲಿ ಸಹಕಾರ ಸಂಘಗಳ ಅಭಿವೃದ್ಧಿಯಲ್ಲಿ ಯುವಕರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ತರಬೇತಿ ಕಾರ್ಯಕ್ರಮ ಮಹತ್ವ ಪಡೆದುಕೊಂಡಿತು.

## ಉದ್ಯೋಗ ಹುಡುಕುವ ಬದಲು ಉದ್ಯಮಿಗಳಾಗಿ : ಅನಿವಾಸಿ ಭಾರತೀಯರಿಗೆ ಕುಮಾರಸ್ವಾಮಿ ಕರೆ

ನೈಜ್ಯ ದೆಸೆ ನ್ಯೂಸ್

**ಅಮೆರಿಕ: ಉದ್ಯೋಗ ಹುಡುಕುವ ಬದಲು ಉದ್ಯಮಿಗಳಾಗಿ, ವಿದೇಶಗಳಲ್ಲಿ ನೆಲೆಸಿರುವ ಭಾರತೀಯರು ತಮ್ಮ ತಂತ್ರಜ್ಞಾನ, ಅನುಭವ ಹಾಗೂ ಪರಿಣತಿಯನ್ನು ಭಾರತದ ಅಭಿವೃದ್ಧಿಗೆ ಬಳಸಬೇಕು ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಕರೆ ನೀಡಿದ್ದಾರೆ.**



ಅಮೆರಿಕದ ಫಿಲಡೆಲ್ಫಿಯಾದಲ್ಲಿ ನಡೆದ ಅಕ್ಕ ಬಿಸಿನೆಸ್ ಫೋರಂ–2026 ಸಮ್ಮೇಳನದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತ ವೇಗವಾಗಿ ಪ್ರಗತಿ ಸಾಧಿಸುತ್ತಿದೆ. 'ಮೇಕ್ ಇನ್ ಇಂಡಿಯಾ' ಹಾಗೂ 'ಆತ್ಮನಿರ್ಭರ ಭಾರತ'ದಂತಹ ಯೋಜನೆಗಳ ಮೂಲಕ ವಿಕಸಿತ ಭಾರತದ ಗುರಿ ಸಾಧಿಸಲು ದೇಶದಲ್ಲಿ ಹೂಡಿಕೆಗೆ ಪೂರಕ ವಾತಾವರಣ ನಿರ್ಮಿಸಲಾಗಿದೆ ಎಂದು ಹೇಳಿದರು. ವಿದೇಶದಲ್ಲಿರುವ ಭಾರತೀಯರು ಭಾರತದಲ್ಲಿ ಹೂಡಿಕೆ ಮಾಡುವ ಮೂಲಕ ದೇಶದ ಕೈಗಾರಿಕಾ ಬೆಳವಣಿಗೆಗೆ ಕೊಡುಗೆ ನೀಡಬೇಕು. ತಮ್ಮ ತಂತ್ರಜ್ಞಾನ, ಜ್ಞಾನ ಮತ್ತು ಜಾಗತಿಕ ಅನುಭವವನ್ನು ದೇಶದ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಬಳಸಬೇಕು ಎಂದು ಅವರು ಮನವಿ ಮಾಡಿದರು. ಉತ್ಪಾದನೆ, ಹಸಿರು ಇಂಧನಕ್ಕೆ ಉತ್ತೇಜನ ದೇಶದ ಕೈಗಾರಿಕಾ ಪ್ರಗತಿಗಾಗಿ ಕೇಂದ್ರ ಸರ್ಕಾರ ಹಲವು ಮಹತ್ವದ ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಸಚಿವರು ವಿವರಿಸಿದರು. ?10,900 ಕೋಟಿ ವೆಚ್ಚದ ಪಿಎಂ ಇ–ಡ್ರೈವ್ ಯೋಜನೆ, ಉತ್ಪಾದನಾ ಉತ್ತೇಜನ ಯೋಜನೆಗೆ ?25,938 ಕೋಟಿ ಹಾಗೂ 50 ಜಿಗಾವಾಟ್ ಸಾಮರ್ಥ್ಯದ ಎಸಿಸಿ ಬ್ಯಾಟರಿ ಕಾರ್ಯಕ್ರಮಕ್ಕೆ ?18,100 ಕೋಟಿ ಮೀಸಲಿಡಲಾಗಿದೆ. ವಿರಳ ಖನಿಜಗಳ ಅಭಿವೃದ್ಧಿಗೂ ?7,280 ಕೋಟಿ ಮೊತ್ತದ ಯೋಜನೆ ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು. ಭಾರತವು ಇಂದು ವಿಶ್ವದ ಪ್ರಮುಖ ಉಕ್ಕು ಉತ್ಪಾದಕ ಹಾಗೂ ಬಳಕೆದಾರ ರಾಷ್ಟ್ರವಾಗಿ ಹೊರಹೊಮ್ಮಿದೆ. 2030ರ ವೇಳೆಗೆ ವಾರ್ಷಿಕ 300 ಮಿಲಿಯನ್ ಟನ್ ಉಕ್ಕು ಉತ್ಪಾದಿಸುವ ಮಹತ್ವಾಕಾಂಕ್ಷೆಯ ಗುರಿಯನ್ನು ಹೊಂದಲಾಗಿದೆ ಎಂದು ಕುಮಾರಸ್ವಾಮಿ ಹೇಳಿದರು.

## ಲಲಿತಾದ್ರಿಪುರ ರಸ್ತೆಯು ಕಸದ ಡಂಪಿಂಗ್ ಯಾರ್ಡ್ ಆಗಿ ಮಾರ್ಪಟ್ಟಿರುವ ಕುರಿತು ಗ್ರಾಮಸ್ಥರ ಮನವಿಗೆ ಸ್ಪಂದನೆ ಮತ್ತು ಸ್ಥಳ ಪರಿಶೀಲನೆ – ಸಚಿವ ಡಾ. ಎಸ್ ಯತೀಂದ್ರ ಸಿದ್ದರಾಮಯ್ಯ

ನೈಜ್ಯ ದೆಸೆ ನ್ಯೂಸ್

**ತಾಂಡವಪುರ: ಮೈಸೂರು ತಾಲೂಕು ವರುಣ ವಿಧಾನಸಭಾ ಕ್ಷೇತ್ರ ಸೇರುವ ಇತಿಹಾಸ ಪ್ರಸಿದ್ಧ ಉಳ್ಳ ಚಾಮುಂಡಿ ಬೆಟ್ಟದ ಸಮೀಪವಿರುವ ಸಕಳ್ಳಿ ಮತ್ತು ಲಲಿತಾದ್ರಿಪುರ ಮುಖ್ಯ ರಸ್ತೆಯಲ್ಲಿ ಎಲ್ಲಿಂದರಲ್ಲಿ ಕಸವನ್ನ ಸುರುತ್ತಿರುವುದನ್ನು ಗ್ರಾಮಸ್ಥರು ಮೈಸೂರು ಜಿಲ್ಲೆ ಉಸ್ತುವಾರಿ ಸಚಿವ ಹಾಗೂ ನಗರ ಅಭಿವೃದ್ಧಿ ಸಚಿವರು ಆದ ಡಾಕ್ಟರ್ ಎಸ್ ಯತೀಂದ್ರ ಸಿದ್ರಾಮಯ್ಯನವರು ಸ್ಥಳಕ್ಕೆ ಭೇಟಿ ನೀಡಿ ಈ ಸ್ಥಳ ಹಾರನಹಳ್ಳಿ ಮತ್ತು ಸುತ್ತಮುತ್ತಲ ಪ್ರದೇಶದಿಂದ ಇಲ್ಲಿ ಕಸ ಪಿಶಾಡುತ್ತಿದ್ದಾರೆ**

ಎನ್ನುವುದು ಗಮನಕ್ಕೆ ಬಂದಿದ್ದು ಈ ಬಗ್ಗೆ ಸದ್ಯದಲ್ಲೇ ಸಭೆ ಕರೆದು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ ಎಂದು ತಿಳಿಸಿದರು ಈ ಸಂದರ್ಭದಲ್ಲಿ ಮೈಸೂರು ತಾಲೂಕು ಪಂಚಾಯಿತಿ ಕಾರ್ಯಾಂಗ ಅಧಿಕಾರಿ ಕೃಷ್ಣ



ಮೈಸೂರು ನಗರ ಪಾಲಿಕೆ ಆಯುಕ್ತೆ ಎಂ.ಕೆ. ಸವಿತಾ ಸೇರಿದಂತೆ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ತೆರಳಿದ ಸಚಿವರು, ರಸ್ತೆ ಬದಿಯಲ್ಲಿ ಬಿದ್ದಿದ್ದ ಕಸದ ರಾಶಿಯನ್ನು ಕಂಡು ತ್ಯಾಜ್ಯವನ್ನು ರಸ್ತೆ ಮೇಲೆ ಸು-ರಿಯುತ್ತಿರುವುದಕ್ಕೆ ಕಾರಣವೇನು ಎಂದು ಅಧಿಕಾ-ರಿಗಳನ್ನು ಪ್ರಶ್ನಿ ಮಾಡಿದ ಸಚಿವರು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಿ ಎಂದು ಖಡಕ್ ಸೂಚನೆ ನೀಡಿದರು ಕಸ ಸುರಿಯುವವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ ಅವರು, ಸ್ಥಳದಲ್ಲಿ ಅಅಖಿಗಿ ಕ್ಯಾಮೆರಾಗಳನ್ನು ಅಳವಡಿಸಿ ನಿಗಾ ವಹಿಸಲಾಗುವುದು ಎಂದರು. ರಸ್ತೆ ಮೇಲೆ ಕಸ ಸುರಿಯುತ್ತಿರುವುದು ಕಂಡುಬಂದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಮೈಸೂರಿನ ಸುತ್ತಮುತ್ತಲಿನ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ರಸ್ತೆಗಳಲ್ಲಿ ಕಸ ಸುರಿಯುತ್ತಿರುವುದಕ್ಕೆ ಕಾರಣವೇನು ಎಂಬುದನ್ನು ತಿಳಿದುಕೊಳ್ಳುವುದಾಗಿ ಸಚಿವ ಡಾಕ್ಟರ್ ಎಸ್. ಯತೀಂದ್ರ ಸಿದ್ದರಾಮಯ್ಯನವರು ಹೇಳಿದರು.

ಲಲಿತಾದ್ರಿಪುರ ರಸ್ತೆಯಲ್ಲಿ ಸುರಿದಿರುವ ಕಸವನ್ನು ಶೀಘ್ರದಲ್ಲೇ ತೆರವುಗೊಳಿಸಲಾಗುವುದು ಎಂದು ಅವರು ತಿಳಿಸಿದರು ಅಲ್ಲದೆ ಖಾಲಿ ನಿವೇಶನಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ, ತ್ಯಾಜ್ಯವನ್ನು ಎಲ್ಲೆಂದರಲ್ಲಿ ಸು-ರಿಯದೆ, ನಿಗದಿತ ಸ್ಥಳದಲ್ಲಿಯೇ ವಿಲೇವಾರಿ ಮಾಡಿ. ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಸ್ವಚ್ಛ ಮೈಸೂರಿನ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸೋಣ. ಆ ರೀತಿ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು ಎಲ್ಲೆಲ್ಲಿ ಕಸದ ಸಮಸ್ಯೆ ಎದುರಾಗುತ್ತದೆಯೋ, ಅಲ್ಲೆಲ್ಲ ತ್ವರಿತ ಪರಿಹಾರ ನೀಡಲು ಸದಾ ಸಿದ್ಧ. ಸ್ವಚ್ಛ ನಗರಗಳು ? ನಮ್ಮೆಲ್ಲರ ಹೊಣೆ. ಆ ದಿಕ್ಕಿನಲ್ಲಿ ನಾವೆಲ್ಲರೂ ಶ್ರಮವಹಿಸೋಣ ಎಂದರು ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಧಿಕಾರಿ ಕೃಷ್ಣ ತಾಲ್ಲೂಕು ದಂಡಾಧಿಕಾ-ರಿಗಳು ಹಾಗೂ ನಗರಪಾಲಿಕೆ ಅಧಿಕಾರಿಗಳು ಹಾಗೂ ಗ್ರಾಮದ ಮುಖಂಡರಾದ ಸಕಳ್ಳಿ ಬಸವರಾಜು ದಲಿತ ಮುಖಂಡ ಜವರಪ್ಪ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಗ್ರಾಮಸ್ಥರು ಹಾಜರಿದ್ದರು

## " ಇಂದಿನ ಪೌಷ್ಠಿಕ ಆಹಾರ ನಾಳಿನ ಸದೃಢ ಭಾರತ " ಬಣ್ಣ ಬಣ್ಣದ ತರಕಾರಿ ಮತ್ತು ರೋಗ ಮುಕ್ತ ಜೀವನಕ್ಕೆ ದಾರಿ ಕಣ್ಣು"

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಸಾಲಗುಂದ ಇವರ ಸಯುಕ್ತ ಆಶ್ರಯದಲ್ಲಿ ಆಯುಷ್ಯ ಆರೋಗ್ಯ ಕೇಂದ್ರ ರವುಡಕುಂದ ವ್ಯಾಪ್ತಿಯಲ್ಲಿ ಬರುವ ತಾಲೂಕಿನ ರವುಡಕುಂದ ಗ್ರಾಮದ 2ನೇ ಅಂಗನವಾಡಿ ಕೇಂದ್ರದಲ್ಲಿ ರಾಷ್ಟ್ರೀಯ ಪೌಷ್ಠಿಕ ಆಹಾರ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಂಡು,**

ಸದರಿ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿಲಾಯಿತು. ಶ್ರೀಮತಿ ಗೀತಾ ಹಿರೇಮಠ್ ತಾಲೂಕ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಇವರು ಮಾತನಾಡಿ ಗರ್ಭಿಣಿ ಉದ್ದೇಶಿಸಿ ಗರ್ಭಿಣಿ ಮತ್ತು ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿನ ಆರೋಗ್ಯಕ್ಕೆ ಸಮತೋಲಿತ ಮತ್ತು ಪೌಷ್ಟಿಕಾಂಶಯುಕ್ತ ಆಹಾರ ಅವಶ್ಯವಾಗಿದೆ ಗರ್ಭಿಣಿಯರು ತಮಗಾಗಿ ಹಾಗೂ ಮಗುವಿನ ಬೆಳವಣಿಗಾಗಿ ಹೆಚ್ಚುವರಿ ಪೋಷಕಾಂಶಗಳನ್ನು ಪಡೆಯಬೇಕಾಗುತ್ತದೆ. ಪೌಷ್ಟಿಕ ಆಹಾರ ಕೊರತೆಯಿಂದಾಗಿ ಹೆರಿಗೆ ಸಮಯದಲ್ಲಿ ಶಿಶುಮರಣ ಸಂಭವಿಸಬಹುದು ಗರ್ಭಾವಸ್ಥೆಯಲ್ಲಿ ಮಹಿಳೆಯರು ಸೂಕ್ಷ್ಮ ವಾಗುವುದರಿಂದ ಮನಸ್ಸಿನ




ಮೇಲೆ ಪರಿಣಾಮ ಆಗದಂತೆ ನೋಡಿಕೊಳ್ಳಬೇಕು,

ಆರೋಗ್ಯಪೂರ್ಣ ಮಗುವಿನ ಹೊಟ್ಟೆಗೆ ಗರ್ಭಿಣಿಯರಿಗೆ ಪೌಷ್ಟಿಕ ಆಹಾರದ ಅವಶ್ಯಕತೆ ಆರೋಗ್ಯ ಪೂರ್ಣ ಮಗುವಿನ ಜನನಕ್ಕೆ ಗರ್ಭಿಣಿಯರಿಗೆ ಅಪೌಷ್ಟಿಕತೆ ಎದುರಾಗದಂತೆ ನೋಡಿಕೊಳ್ಳಬೇಕು ಕನಿಷ್ಠ ಎರಡು(2) ವರ್ಷದವರೆಗೆ ಮಗುವಿಗೆ ಎದೆ ಹಾಲುಣಿಸುವುದನ್ನು ರೂಢಿ ಮಾಡಿಕೊಂಡರೆ ಮಗುವಿನ ಬುದ್ಧಿ ಶಕ್ತಿ ದೈಹಿಕ ಬೆಳವಣಿಗೆ ಹೆಚ್ಚಾಗುತ್ತದೆ 6 ತಿಂಗಳವರೆಗೆ ಮಗುವಿಗೆ ತಾಯಿ ಎದೆ ಹಾಲು ಹೊರತುಪಡಿಸಿ ಯಾವುದೇ ಆಹಾರ ನೀಡಬಾರದು, ನಂತರ ಪೂರಕ ಆಹಾರ ನೀಡಬೇಕು ಏಕದಳ ಧಾನ್ಯವನ್ನು ಇಟ್ಟು ಮಾಡಿಸಿ ಬಿಸಿ ನೀರಿನಲ್ಲಿ ಬೆರೆಸಿ ತಿನ್ನಿಸಬೇಕು ಇದರಿಂದ ಮಗು ಶೀತ, ನೆಗಡಿಯಾಗಿ,ಜ್ವರದಿಂದ ಬಳಲುವುದನ್ನು ತಪ್ಪಿಸಬಹುದು. ತಾಯಿಯಲ್ಲಿ ರಕ್ತ ಹೀನತೆ ತಡೆಯಲು ಮತ್ತು ಭ್ರೂಣಕ್ಕೆ ಉತ್ತಮ ರಕ್ತ ಪರಿಚಲನೆಗೆ ಕಬ್ಬಿಣಾಂಶ ಅತ್ಯಗತ್ಯ ಮಗುವಿನ ಮೂಳೆಗಳು ಮತ್ತು ಹಲ್ಲುಗಳ ಬಲವಾದ ಬೆಳವಣಿಗೆಗೆ ಕ್ಯಾಲ್ಸಿಯಂ ಬೇಕೆ ಬೇಕು ಮಗುವಿನ ಮೆದುಳು ಮತ್ತು ಬೆನ್ನೂರಿಯ ಜನ್ಮಜಾತ ದೋಷಗಳನ್ನು ತಡೆಯಲು ಇದು ಮೊದಲ ಮೂರು(3) ತಿಂಗಳು ಪ್ರಮುಖ ಪಾತ್ರ ವಹಿಸುತ್ತದೆ ಐರನ್ ಪಾಲಿಕ್ ಆಸಿಡ್ (IFA) ಮಾತ್ರೆಗಳನ್ನು ಸರಿಯಾದ ಸಮಯದಲ್ಲಿ ಕ್ರಮಬದ್ಧವಾಗಿ ತೆಗೆದುಕೊಳ್ಳಬೇಕು ಭ್ರೂಣದ ಅಂಗಾಂಶಗಳು ಮತ್ತು ಸ್ನಾಯುಗಳ ಬೆಳವಣಿಗೆಗೆ ಪ್ರೋಟಿನ್ ಸಹಾಯಕಾರಿ ಮೊಳಕೆ ಬರಿಸಿದ ಕಾಳುಗಳು, ಬೇಳೆಗಳು, ಪನ್ನೀರ,ಮೊಟ್ಟೆ, ಮತ್ತು ಚಿಕನ್,

ಆಹಾರ ಸೇವನೆ ಮಾಡಬೇಕು ದಿನನಿತ್ಯದ ಆಹಾರ ಕ್ರಮದಲ್ಲಿ ಧಾನ್ಯಗಳು ಮತ್ತು ಸಿರಿಧಾನ್ಯಗಳು ಶಕ್ತಿಗಾಗಿ ಕೆಂಪಕ್ಕಿ ಗೋಧಿ ಚಪಾತಿ ರಾಗಿ ಮತ್ತು ಓಟ್ಸ್ ಸೇವಿಸಿ ಅವುಗಳಲ್ಲಿ ಮಲಬದ್ಧತೆ ತಡೆಯುವ ನಾರಿನ ಅಂಶ ಹೇರಳವಾಗಿರುತ್ತದೆ ತರಕಾರಿ ಮತ್ತು ಹಣ್ಣುಗಳ ದಿನಕ್ಕೆ ಕನಿಷ್ಠ ಎರಡು ಬಾರಿ ಹಣ್ಣು ಹಾಗೂ ವಿವಿಧ ಬಣ್ಣದ ತರಕಾರಿಗಳನ್ನು ಸೇವಿಸಿ ಇವು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಆರೋಗ್ಯಕರ ಕೊಬ್ಬುಗಳನ್ನು ಹೊಂದಿರುವ ಬಾದಾಮಿ ಪಿಸ್ತಾ ಗೋಡಂಬಿ ಮತ್ತು ಅಡಿಗೆಯಲ್ಲಿ ತುಪ್ಪದ ಬಳಕೆ ಮಿತವಾಗಿರಬೇಕು ನಾರಿನಾಂಶ ಮತ್ತು ದ್ರವ ಪದಾರ್ಥಗಳನ್ನು ಬಳಕೆ ಹೇರಳವಾಗಿರಬೇಕು ದಿನಕ್ಕೆ ಕನಿಷ್ಠ 8 ರಿಂದ 10 ಗ್ಲಾಸ್ ನೀರು ಕುಡಿಯಬೇಕು ಎಳೆನೀರು ಮಜ್ಜಿಗೆ ಮತ್ತು ತಾಜಾ ಹಣ್ಣಿನ ರಸಗಳು ದೇಹವನ್ನು ಹೈಡ್ರೇಟ್ ಆಗಿಡುತ್ತದೆ ಒಂದೇ ಬಾರಿ ಅತಿಯಾಗಿ ಉಣ್ಣುವ ಬದಲು ದಿನದಲ್ಲಿ ಕಡಿಮೆ ಪ್ರಮಾಣದಲ್ಲಿ ಸೇವಿಸಬೇಕು ವಿಂಗಡಿಸಿ ಆಹಾರವನ್ನು 5–6 ಬಾರಿ ಸೇವಿಸುವುದರಿಂದ ವಾಕರಿಕೆ ಮತ್ತು ಜೀರ್ಣಕ್ರಿಯ ತೊಂದರೆಗಳು ಕಡಿಮೆಯಾಗುತ್ತದೆ ವೈದ್ಯರು ಶಿಫಾರಸ್ಸು ಮಾಡುವ ಕಬ್ಬಿಣ ಅಂಶ, ಕ್ಯಾಲ್ಸಿಯಂ ಮತ್ತು ಐರನ್ ಪೋಲಿಕ್ ಆಸಿಡ್ ಮಾತ್ರೆಗಳು ತಪ್ಪದೆ ತೆಗೆದುಕೊಳ್ಳಬೇಕು,.

ಗರ್ಭಿಣಿ ಮಹಿಳೆಯರು ದೂರವಿಡಬೇಕಾದ ಆಹಾರ ಪದಾರ್ಥಗಳು ಹಸಿ ಅಥವಾ ಅರ್ಧ ಬೇಯಿಸಿದ ಮೊಟ್ಟೆ ಮತ್ತು ಮಾಂಸ ತೊಳೆಯದ ಹಣ್ಣುಗಳು ಮತ್ತು ತರಕಾ-ರಿಗಳು ಸಂಸ್ಕರಿಸಿದ ಜಂಕ್ ಫುಡ್ ಬೇಕರಿ ಪದಾರ್ಥಗಳು ಅತಿಯಾದ ಕಾಫಿ ಟೀ( ಕೆಫೀನ್ ) ಮತ್ತು ಸಂಪೂರ್ಣವಾಗಿ ಆಲ್ಕೋಹಾಲ್ ನಿಷಿದ್ಧ ಇವುಗಳಿಂದ ದೂರವಿರಬೇಕು ಎಂದು ಗರ್ಭಿಣಿ ತಾಯಂದಿರಿಗೆ ತಿಳಿಸಲಾಯಿತು.ಈ ಸಂದರ್ಭದಲ್ಲಿ ಅಂಬಮ್ಮ ಕಊಅಔ, ಪ್ರಸನ್ನ ಕುಮಾರ ಅಊಔ, ಶಿವಕುಮಾರ್ ಊಖಔ, ಪುಷ್ಪಾ,ಸುಮಿತ್ರಾ ಆಶಾ ಕಾರ್ಯಕರ್ತೆಯರು, ಸುಧಾ,ಜಾರಿನ, ಜಯಮ್ಮ,ಕವಿತಾ ಅಂಗನವಾಡಿ ಕಾರ್ಯಕರ್ತೆಯರು,ತಾಯಂದಿರು ಹಾಗೂ ಗರ್ಭಿಣಿ ಮಹಿಳೆಯರು ಸಾರ್ವಜನಿಕರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**ಸರ್ಕಾರಿ ಏರೋನಾಟಿಕಲ್ ತರಬೇತಿ ಶಾಲೆ ನೇಮಕಾತಿ 2026–3 ಮುಖ್ಯ ವಿಮಾನಯಾನ ಬೋಧಕ (Chief Flight Instructor) ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 2, 2026**

ಸರ್ಕಾರಿ ಏರೋನಾಟಿಕಲ್ ತರಬೇತಿ ಶಾಲೆ ನೇಮಕಾತಿ 2026: 3 ಮುಖ್ಯ ವಿಮಾನಯಾನ ಬೋಧಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ, ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಮುಖ್ಯ ವಿಮಾನಯಾನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಿ ಏರೋನಾಟಿಕಲ್ ತರಬೇತಿ ಶಾಲೆಯು ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರದ ಅಡಿಯಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಸೆಪ್ಟೆಂಬರ್–2026 ರೊಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: dyes.karnataka.gov.in

## ಬರ ಪೀಡಿತ ಪ್ರದೇಶ ಘೋಷಣೆಗೆ ಸರ್ಕಾರದ ನಿರ್ಲಕ್ಷ್ಯ ವೀರೇಶ ನಿಡಗುಂದಿಮಠ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ:** ತಾಲೂಕಿನಲ್ಲಿ ಸಕಾಲದಲ್ಲಿ ಮಳೆಯಾಗದೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿತ್ತನೆಗಾಗಿ ಬೀಜ, ಗೊಬ್ಬರ ಸೇರಿದಂತೆ ಅಗತ್ಯ ಕೃಷಿ ಪರಿಕರಗಳನ್ನು ಸಾಲ–ಶೂಲ ಮಾಡಿ ಖರೀದಿಸಿರುವ ರೈತರು, ಮಳೆ ಕೊರತೆಯಿಂದ ಕಂಗಾಲಾಗಿದ್ದಾರೆ. ಆದರೂ ಕುಷ್ಟಗಿ ತಾಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸುವಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಜಾತ್ಯತೀತ ಜನತಾದಳದ ತಾಲೂಕು ಅಧ್ಯಕ್ಷ ವೀರೇಶ ನಿಡಗುಂದಿಮಠ ಆರೋಪಿಸಿದ್ದಾರೆ.




ಮಳೆ ಕೊರತೆಯಿಂದ ಯಲಬುರ್ಗಾ, ಕುಷ್ಟಗಿ ಹಾಗೂ ಕೊಪ್ಪಳ ತಾಲೂಕುಗಳ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಈ ತಾಲೂಕುಗಳಲ್ಲಿನ ಬರ ಪರಿಸ್ಥಿತಿಯನ್ನು ಸರ್ಕಾರ ಮರುಪರಿಶೀಲಿಸಿ, ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕು. ಕುಷ್ಟಗಿ ತಾಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಿ, ಅರ್ಹ ರೈತರಿಗೆ ಸರ್ಕಾರದ ಬರ ಪರಿಹಾರ ಸೌಲಭ್ಯಗಳನ್ನು ಒದಗಿಸಬೇಕು ಎಂದು ಅವರು ಒತ್ತಾಯಿಸಿದರು. ರೈತರ ಸಂಕಷ್ಟವನ್ನು ಕಡೆಗಣಿಸಿ ಬರ ಘೋಷಣೆಯಲ್ಲಿ ಮತ್ತಷ್ಟು ವಿಳಂಬ ಮಾಡಿದರೆ ತಾಲೂಕಾದ್ಯಂತ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ ಅವರು, ತಕ್ಷಣ ಕುಷ್ಟಗಿ ತಾಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಬೇಕು ಎಂದು ಆಗ್ರಹಿಸಿದರು.

## ಸೆ. 9ರಂದು ಚನ್ನಬಸವ ಶಿವಯೋಗಿಗಳ ಗುರುನಮನ, ಪುಣ್ಯಾರಾಧನೆ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ:** ತಾಲೂಕಿನ ನೀಡಸೇಷಿ ಗ್ರಾಮದಲ್ಲಿ ಇತ್ತೀಚೆಗೆ ಲಿಂಗೈಕ್ಯರಾದ ಪೂಜ್ಯ ಚನ್ನಬಸವ ಶಿವಯೋಗಿಗಳ ಗುರುನಮನ ಹಾಗೂ ಪುಣ್ಯಾರಾಧನೆ ಕಾರ್ಯಕ್ರಮ ಸೆ. 9ರಂದು ಭಕ್ತಿಭಾವದಿಂದ ನಡೆಯಲಿದೆ.



ಅಭಿನವ ಕರಿಬಸವ ಶಿವಾಚಾರ್ಯರ ನೇತೃತ್ವದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಬೆಳಿಗ್ಗೆ ಮಹಾರುದ್ರಾಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ವಿಧಿ–ವಿಧಾನಗಳು ಜರುಗಲಿವೆ. ನಂತರ ಧರ್ಮಸಭೆ ನಡೆಯಲಿದೆ. ಧರ್ಮಸಭೆಯಲ್ಲಿ ವಿವಿಧ ಮಠಾಧೀಶರು, ಧಾರ್ಮಿಕ ಗಣ್ಯರು ಹಾಗೂ ಭಕ್ತರು ಭಾಗವಹಿಸಲಿದ್ದಾರೆ. ಪೂಜ್ಯ ಚನ್ನಬಸವ ಶಿವಯೋಗಿಗಳ ಭಕ್ತರು, ಅನುಯಾಯಿಗಳು ಹಾಗೂ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ನೀಡಸೇಷಿ ಗ್ರಾಮಸ್ಥರಲ್ಲಿ ಪೂಜ್ಯರು ಮನವಿ ಮಾಡಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಪ್ರವಾದಿಯವರ ಆದರ್ಶದಂತೆ ಕಾರುಣ್ಯ ಆಶ್ರಮದ ಸೇವೆ ನೆಡೆಯುತ್ತಿದೆ –––ಆಯಿಷಾ ಪೋತ್ನಾಳದ ಜಮಾ ಅತೆ ಇಸ್ಲಾಮಿ ಹಿಂದ್ ಮಹಿಳಾ ಘಟಕದಿಂದ ಕಾರುಣ್ಯಾಶ್ರಮಕ್ಕೆ ಭೇಟಿ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಮಾನ್ವಿ ತಾಲೂಕಿನ ಪೋತ್ನಾಳದ ಜಮಾ ಅತೆ ಇಸ್ಲಾಮಿ ಹಿಂದ್ ಮಹಿಳಾ ಘಟಕದ ಎಲ್ಲಾ ಪದಾಧಿಕಾರಿಗಳು ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರ ಜನ್ಮದಿನದ ನಿಮಿತ್ಯ ಸಿಂಧನೂರಿನ ಕಾರುಣ್ಯ ಆಶ್ರಮಕ್ಕೆ ಭೇಟಿ ನೀಡಿ ಆಶ್ರಯದಾತರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಆತ್ಮಸ್ಥೈರ್ಯ ತುಂಬಿ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು.**







ಈ ಕಾರ್ಯಕ್ರಮದಲ್ಲಿ ಪೋತ್ನಾಳ ಘಟಕದ ಜಮಾಅತೆ ಇಸ್ಲಾಮಿ ಹಿಂದ್ ಮಹಿಳಾ ಘಟಕದ ಅಧ್ಯಕ್ಷರಾದ ಆಯಿಷಾ ಮಾತನಾಡಿ ಪ್ರವಾದಿಯವರ ಆದರ್ಶದಂತೆ ಕಾರುಣ್ಯ ಆಶ್ರಮದ ಸೇವೆ ನಡೆಯುತ್ತಿದೆ. ಸಮಾಜದಿಂದ ಕುಟುಂಬದಿಂದ ತಿರಸ್ಕೃತಗೊಂಡ ಮನಸ್ಸುಗಳನ್ನು ಒಟ್ಟುಗೂಡಿಸಿ ಅವರ ಹಿಂದಿನ ಜೀವನದ ಕಷ್ಟಗಳನ್ನು ಮರೆಸುವ ಮೂಲಕ ಮಾನವೀಯತೆಯ ಮಂದಿರವಾಗಿದೆ ನಮ್ಮ ಕಾರುಣ್ಯ ಆಶ್ರಮ. ಪ್ರವಾದಿಯವರು ಕೂಡ ಇಂತಹ ನೊಂದವರ ಬಾಳಿಗೆ ಬೆಳಕಾಗಿ ಸರ್ವಸಮಾನತೆಯ ಹಾದಿಯಲ್ಲಿ ಸರ್ವಧರ್ಮಕ್ಕೆ ಮಾನವೀಯತೆಯನ್ನು ಹಂಚುವ ನಡೆದಾಡುವ ದೇವರಾಗಿದ್ದರು. ಅವರ ಇಂದಿನ ಈ ಪವಿತ್ರ ಕಾರ್ಯದ ಮೂಲಕ ಅವರನ್ನು ನೆನಪಿಸಿಕೊಂಡು ಅವರ ಆಶೀರ್ವಾದದೊಂದಿಗೆ ಈ ಆಶ್ರಮದಲ್ಲಿ ಆಶ್ರಯ ಪಡೆಯುತ್ತಿರುವ ಎಲ್ಲಾ ನಮ್ಮ ತಂದೆ ತಾಯಿಗಳ ಸಮಾನರಾಗಿರುವ ಹಿರಿಯ–ರಿಗೂ ಹಾಗೂ ವಯಸ್ಕರ ಬುದ್ಧಿಮಾಂದ್ಯರ ಆಶೀರ್ವಾದ ನಮ್ಮ ಜನ್ಮ ಸಾರ್ಥಕವಾಗಿದೆ.

ಇಂದಿನ ಸಮಾಜದಲ್ಲಿ ಮಕ್ಕಳಾದವರು ಹೆತ್ತವರನ್ನು ನಮ್ಮಂತಹ ವೃದ್ಧಾಶ್ರಮಕ್ಕೆ ತಳ್ಳಬಾರದು ಎನ್ನುವ ಸಂದೇಶವನ್ನು ಸಮಾಜ–ಕ್ಕೆ ಸಾರುತ್ತಿರುವ ಈ ಕಾರುಣ್ಯ ಕುಟುಂಬ ನಮ್ಮ ಕಲ್ಯಾಣ ಕರ್ನಾಟಕದ ಕರುಣೆಯ ಕುಟುಂಬವಾಗಿದೆ ಎಂದು ಭಾವನಾತ್ಮಕವಾಗಿ ಮಾತನಾಡಿ ಆಶ್ರಮದ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ನಂತರ ಜಿ. ಎಚ್. ಪಿ. ಎಸ್. ಪೋತ್ನಾಳ ಶಾಲೆಯ ಸಹ ಶಿಕ್ಷಕರಾದ ಸುಮಾ ಮಾತನಾಡಿ ಕರುಣೆಯ ಪ್ರತಿರೂಪದ ಕಾರುಣ್ಯಾಶ್ರಮವು ಪುಣ್ಯದ ಪವಿತ್ರ ಮಂದಿರವಾಗಿದೆ. ಇಂತಹ ಪುಣ್ಯ ಕಾರ್ಯಗಳನ್ನು ಮಾಡುತ್ತಿರುವ ಸಾಮಾನ್ಯ ಬಡ ಕುಟುಂಬದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಅವರು ಸಮಾಜದ ದೇವತಾ ಮನುಷ್ಯರಾಗಿದ್ದಾರೆ. ಅವರ ಆದರ್ಶ ಮಾರ್ಗದರ್ಶನ ನಮ್ಮ ಸಮಾಜದ ಬಹುದೊಡ್ಡ ಆಸ್ತಿಯಾಗಿದೆ.

ಸ್ವಾರ್ಥದ ಈ ಜಗತ್ತಿನಲ್ಲಿ ನಿಸ್ವಾಥ–ರ್ದೊಂದಿಗೆ ಮಾಡುತ್ತಿರುವ ಕಾರುಣ್ಯ ಆಶ್ರಮದ ಸೇವೆಗೆ ನಾವೆಲ್ಲರೂ ಜೊತೆಗಿರುತ್ತೇವೆ ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಪೋತ್ನಾಳದ ಜಮಾಅತೆ ಇಸ್ಲಾಮಿ ಹಿಂದ್ ಮಹಿಳಾ ಘಟಕದ ಕಾರ್ಯಕರ್ತರುಗಳಾದ ಶಾಹಿನ್ ಬೇಗಂ. ಕೌಸರ್ ಬೇಗಂ. ತರನ್ನಮ್. ತಸ್ಲೀಮ್ ಬೇಗಂ. ಉಮ್ಮ ಐವಾನ್. ಮುನ್ನಾ ಬೀ. ಸುಮಾ ಆಶ್ರಮದ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ.ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ ಹಾಗೂ ಅನೇಕರು ಉಪಸಿತರಿದ್ದರು

# ವಿಶ್ವಕರ್ಮ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಆಡಳಿತ ಮಂಡಳಿ ಹಾಗೂ ಉತ್ತಮ ಗ್ರಾಹಕರಿಗೆ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ಶ್ರೀ ವಿಶ್ವಕರ್ಮ ಹಿಂದುಳಿದ ವರ್ಗಗಳ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಕುಷ್ಟಗಿ ಇದರ 13ನೇವಾರ್ಷಿಕ ಮಹಾಸಭೆ ದಿನಾಂಕ 6–9–2026ರಂದು ಶ್ರೀ ಕಾಳಿಕಾದೇವಿ ದೇವಸ್ಥಾನದ ಭವನದಲ್ಲಿ ಜರುಗಿತು ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವೀರಣ್ಣ ನಾಗಲಿಂಗಪ್ಪ ಪತ್ತಾರ ಹಾಗೂ ಉಪಾಧ್ಯಕ್ಷರಾದ ಶ್ರೀ ಕಾಳಪ್ಪ ಬಸಪ್ಪ ಬಡಿಗೇರ ಉಪಸ್ಥಿತರಿದ್ದರು ಶ್ರೀ ಗುರಪ್ಪ ಬಡಿಗೇರ ನಿವೃತ್ತ ಹಿರಿಯ ಲೆಕ್ಕಪರಿಶೋಧಕರು ಮಾತನಾಡಿ, ಸಂಘದ ಬೆಳವಣಿಗೆಯಲ್ಲಿ ಸದಸ್ಯರು ಹಾಗೂ ಗ್ರಾಹಕರ ಸಹಕಾರ ಮಹತ್ವದ್ದಾಗಿದೆ.**





ಸಾಲಗಾರರು ಸುಸ್ತಿ ಯಾಗದಂತೆ ಸಾಲು ಮರುಪಾವತಿ ಮಾಡುವ ಮೂಲಕ ಸಂಘದ ಬೆಳವಣಿಗೆಗೆ ಸಹಕ–ರಿಸಬೇಕು.ಸಂಘದ ಆರ್ಥಿಕ ಪ್ರಗತಿ ಹಾಗೂ ಸದಸ್ಯರ ಹಿತಾಸಕ್ತಿಗಾಗಿ ಮುಂದಿನ ದಿನಗಳಲ್ಲಿಯೂ ಹಲವು ಯೋಜನೆಗಳನ್ನು ರೂಪಿಸಲಾಗುವುದು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಸಂಘದ ಆಡಳಿತ ಮಂಡಳಿಯ ಸದಸ್ಯರನ್ನು ಹಾಗೂ ಉತ್ತಮ ಗ್ರಾಹಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಭೆಯಲ್ಲಿ ಆಡಳಿತ ಮಂಡಳಿ ಸದಸ್ಯರಾದ ಶ್ರೀ ವಾಸಪ್ಪ ಶಂಕ್ರಪ್ಪ ಪತ್ತಾರ, ಶ್ರೀ ಗುರಪ್ಪ ಶಂಕ್ರಪ್ಪ ಬಡಿಗೇರ, ಶ್ರೀ ಯಚರಪ್ಪ ವೀರಪ್ಪ ಬಡಿಗೇರ, ಶ್ರೀ ಸಿದ್ದಪ್ಪ ಗಂಗಪ್ಪ ಬಡಿಗೇರ, ಶ್ರೀ ಭೀಮಣ್ಣ ರುದ್ರಪ್ಪ ಬಡಿಗೇರ, ಶ್ರೀ ಭೀಮಶೇನ ಮಾನಪ್ಪ ಕಮ್ಮಾರ, ಶ್ರೀ ರಾಮಚಂದ್ರ ವಿರುಪಾಕ್ಷಪ್ಪ ಬಡಿಗೇರ, ಶ್ರೀ ಮಾನಪ್ಪ ಸಕ್ರಪ್ಪ ಕಮ್ಮಾರ, ಶ್ರೀ ವಿಜಯಕುಮಾರ ಕಾಳಪ್ಪ ಕಮ್ಮಾರ, ಶ್ರೀ ಕಾಳಪ್ಪ ಚಿದಾನಂದಪ್ಪ ಬಡಿಗೇರ, ಶ್ರೀಮತಿ ಉಮಾದೇವಿ ಶ್ರೀಕಾಂತ ಬಡಿಗೇರ, ಶ್ರೀಮತಿ ಸುಜಾತ ಸುರೇಶ ಬಡಿಗೇರ ಹಾಗೂ ಸಂಘದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಮಂಜುನಾಥ ಬಡಿಗೇರ ಹಾಗೂ ಪಿಗ್ಮಿ ಏಜೆಂಟರಾದ ಶ್ರೀ ವಿರೂಪಾಕ್ಷಪ್ಪ.ಶ್ರೀ ರವೀಂದ್ರ ಬಡಿಗೇರ, ಶ್ರೀ ರಮೇಶ ಕಮ್ಮಾರ ಮತ್ತು ಶ್ರೀ ವೀರಭದ್ರಪ್ಪ ಕಮ್ಮಾರ ಅವರು ಉಪಸ್ಥಿತರಿದ್ದರು.

ಸಭೆಯಲ್ಲಿ ಸಂಘದ ಸರ್ವ ಸದಸ್ಯರು ಭಾಗವಹಿಸಿ, ಸಂಘದ ಕಾರ್ಯಚಟುವಟಿ–ಕೆಗಳು ಹಾಗೂ ಮುಂದಿನ ಅಭಿವೃದ್ಧಿ ಕು–ರಿತು ಚರ್ಚಿಸಿದರು. ಲೆಕ್ಕಪತ್ರ ಒಪ್ಪಿಗೆ ಪಡೆಯಲಾಯಿತು .ಸಂಘವು ಪ್ರಸಕ್ತ ಸಾಲಿನಲ್ಲಿ ರೂ.3.52 ಲಕ್ಷ ಲಾಭಗಳಿಸಿದೆ ಸದಸ್ಯರಿಗೆ ಶೆ.15ರಷ್ಟು ಷೇರು ಡಿವಿಡೆಂಡ ಘೋಷಿಸಲಾಗಿದೆ


# ಸಾಕ್ಷಿ ' ಕಿರುಚಿತ್ರ ಚಿತ್ರೀಕರಣ ಮುಕ್ತಾಯ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕಲಾಪೋಷಕರ ಮಠ ಸುಕ್ಷೇತ್ರ ಸಿದ್ಧನಕೊಳ್ಳದ ಪೂಜ್ಯ ಶ್ರೀ ಡಾ. ಶಿವಕುಮಾರ ಸ್ವಾಮೀಜಿಯವರ ಆಶೀರ್ವಾದದೊಂದಿಗೆ ಕೀರ್ತನ ಮೂವಿ ಮೇಕರ್ಸ್ ಅವ–ರಿಂದ ನಿರ್ಮಾಣವಾಗುತ್ತಿರುವ 'ಸಾಕ್ಷಿ ' ಕಿರುಚಿತ್ರದ ಚಿತ್ರೀಕರಣ ಮುಕ್ತಾಯವಾಗಿ ಸಂಕಲನ ಕಾರ್ಯ ಆರಂಭವಾಗಿದೆ.**

ಕೊಲೆ ರಹಸ್ಯ ಭೇದಿಸುವ ರೋಚಕ ಕಥೆಯುಳ್ಳ ಕಿರು ಚಿತ್ರ ಐದು ದಿನಗಳ ಕಾಲ ಬೆಂಗಳೂರಿನ ವಿವಿಧ ಕಡೆ ಚಿತ್ರೀಕರಣ ನಡೆಸಲಾಯಿತು. ಈ ಮೊದಲು 'ಒಬ್ಬಟ್ಟು' ಸಸ್ಪೆನ್ಸ್,ಥ್ರಿಲ್ಲರ್ ಹಾಸ್ಯಕಥೆಯ ಚಿತ್ರ ನಿರ್ದೇಶಿಸಿ,ನಿರ್ಮಿಸಿ ಬಿಡುಗಡೆ ಮಾಡಿದ್ದೆ. ಸಧ್ಯದಲ್ಲೇ ನನ್ನ ನಿರ್ದೇಶನದ ಎರಡನೇ ಸಿನೇಮಾ 'ಹೂಗಾರ' ಚಲನಚಿತ್ರ ಸೆನ್ಸಾರ್‌ಗೆ ಹೋಗಲು ಅಂತಿಮ ಸಿದ್ಧತೆ ನಡೆಸಿದ್ದೇನೆ. ಮತ್ತು ಈಗಾಗಲೇ ಮೂರನೆಯ ಹೊಸ ಸಸ್ಪೆನ್ಸ್ ,ಥ್ರಿಲ್ಲರ್ ಹಿನ್ನೆಲೆಯ ಸಿನೇಮಾದ ಸ್ಕ್ರಿಪ್ಟ್ ಸಿದ್ಧವಾಗುತ್ತಿದೆ. ಕಲಾವಿದರ ಆಯ್ಕೆ ಕೂಡ ನಡೆಸಿದ್ದೇನೆ. ಬಿಡುವಿನ ನಡುವೆ ತಂಡ ಸಕ್ರಿಯವಾಗಿರಲು ಕಿರುಚಿತ್ರ ನಿರ್ಮಿಸೋಣ ಎಂದು ತಂಡದ ಸದಸ್ಯರೆಲ್ಲರೂ ನಿರ್ಧರಿಸಿ 'ಸಾಕ್ಷಿ' ನಿರ್ಮಿಸಿದ್ದೇವೆ. ಮುಂದಿನ ತಿಂಗಳು ಓ ಟಿ ಟಿ ಹಾಗೂ ಯೂಟ್ಯೂಬ್ ಗೆ ರಿಲೀಸ್ ಮಾಡಲಾಗುತ್ತದೆ. ಚಿತ್ರ ಪ್ರೇಮಿಗಳು ತಂಡಕ್ಕೆ ಪ್ರೋತ್ಸಾಹ ನೀಡಬೇಕು ಎಂದು ನಿರ್ದೇಶಕ ಲೋಕೇಶ್ ವಿದ್ಯಾಧರ್ ತಿಳಿಸಿದರು.

ಮುಖ್ಯ ಪಾತ್ರದಲ್ಲಿ ಲೋಕೇಶ್ ವಿದ್ಯಾಧರ , ವಿದ್ಯಾಶ್ರೀ, ಹುನಗುಂದದ ಮಹಾಂತೇಶ್ ಹಳ್ಳೂರ, ಸತೀಶ್ ಶೆಟ್ಟಿ ಮುತ್ತುರಾಜ್ ಬುದ್ನಿ, ಜೀವನ ಗೌಡ, ಗೀತಾ, ರೋಹಿತ್, ಪಲ್ಲವಿ, ಸುರೇಶ್ ಗ್ಲೋರಿ , ಕಿಟ್ಟಿ ತಾಳಿಕೋಟೆ ಮೊದಲಾದವರು ಅಭಿನಯಿಸಿದ್ದಾರೆ.



ಕ್ಯಾಮೆರಾ ಬೆಟ್ಟೆಗೌಡ ಕಿಲಾರ, ಗೋವರ್ಧನ್ ಮೇಕಪ್, ಶಿವು ಹೇರ್ ಸ್ಟೈಲ್, ಪಲ್ಲವಿ, ಸಂಕಲನ ಶಿವರಾಜ್, ಡಿಐ ಜೀವನ್, ನೃತ್ಯ ರಾಜು ಮಾಸ್ಟರ್, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ್ ಹಂಡಿಗಿ ಪತ್ರಿಕಾ ಸಂಪರ್ಕ, ಕಥೆ–ಚಿತ್ರಕಥೆ, ಸಂಭಾಷಣೆ ಜೊತೆಗೆ ನಿರ್ದೇಶನ ಹೊಣೆ ಲೋಕೇಶ್ ವಿದ್ಯಾಧರ ವಹಿಸಿಕೊಂಡಿದ್ದಾರೆ. ನಿರ್ಮಾಣ ಕೀರ್ತನ ಮೂವಿ ಮೇಕರ್ಸ್ ಹಾಗೂ ಚಿತ್ರತಂಡದ ಬಳಗ ಹೊತ್ತು ಕೊಂಡಿದೆ. .

–ಡಾ.ಪ್ರಭು ಗಂಜಿಹಾಳ

# ಮಸ್ಕಿಯಲ್ಲಿ ಸೆ.9ರಂದು 'ಸೀರತ್ ಸಂದೇಶ' ಕಾರ್ಯಕ್ರಮ

## ಪ್ರವಾದಿ ಮುಹಮ್ಮದ್ ಅವರ ಜೀವನ, ಸಂದೇಶ ಹಾಗೂ ಮಾನವೀಯ ಮೌಲ್ಯಗಳ ಪರಿಚಯಕ್ಕೆ ವೇದಿಕೆ

❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪ್ರವಾದಿ ಮುಹಮ್ಮದ್ ಅವರ ಜನ್ಮದಿನದ ಅಂಗವಾಗಿ ಅವರ ಜೀವನ, ಆದರ್ಶಗಳು, ಸಂದೇಶ ಹಾಗೂ ಮಾನವೀಯ ಮೌಲ್ಯಗಳನ್ನು ಸಮಾಜಕ್ಕೆ ಪರಿಚಯಿಸುವ ಉದ್ದೇಶದಿಂದ ಸೆಪ್ಟೆಂಬರ್ 9ರಂದು ಮಸ್ಕಿಯಲ್ಲಿ 'ಸೀರತ್ ಸಂದೇಶ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಜಮೀ ಉಲಮಾ–ವ–ಹಾಫೀಜ್ ಮಸ್ಕಿ ತಾಲೂಕು ಸಮಿತಿ ತಿಳಿಸಿದೆ.**





ನಗರದ ಬಳಗಾನೂರು ರಸ್ತೆಯಲ್ಲಿರುವ ಭಾರತ ಫಂಕ್ಷನ್ ಹಾಲ್‌ನಲ್ಲಿ ಸೆ.9ರಂದು ಸಂಜೆ 6.30ಕ್ಕೆ ಕಾರ್ಯಕ್ರಮ ನಡೆಯಲಿದ್ದು, ವಿವಿಧ ಧರ್ಮಗಳ ಧರ್ಮಗುರುಗಳು, ಜನಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಧರ್ಮಗುರು ಜಿಲಾನಿ ಖಾಜಿ ಅವರು ಮಾಹಿತಿ ನೀಡಿದರು. ಪ್ರವಾದಿ ಮುಹಮ್ಮದ್ ಅವರ ಜೀವನವು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿರದೆ, ಇಡೀ ಮಾನವಕುಲಕ್ಕೆ ಪ್ರೀತಿ, ಕರುಣೆ, ಸಹನೆ, ಸಹಬಾಳ್ವೆ, ಸತ್ಯ, ನ್ಯಾಯ ಹಾಗೂ ಮಾನವೀಯತೆಯ ಸಂದೇಶವನ್ನು ಸಾರುತ್ತದೆ. ಅವರ ಜೀವನ ಚ–ರಿತ್ರೆ ಮತ್ತು ಆದರ್ಶಗಳನ್ನು ಇಂದಿನ ಯುವಜನತೆ ಹಾಗೂ ಸಮಾಜಕ್ಕೆ ಪರಿಚಯಿಸುವುದು 'ಸೀರತ್ ಸಂದೇಶ' ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ವಿವಿಧ ಧರ್ಮಗಳ ಗಣ್ಯರ ಭಾಗಿ ಕಾರ್ಯಕ್ರಮದಲ್ಲಿ ಗಚ್ಚಿನ ಹಿರೇಮಠದ ಶ್ರೀ ವರರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಮಸ್ಕಿ ಚರ್ಚ್ ಧರ್ಮಕೇಂದ್ರದ ಗುರು ಫಾ. ಕ್ಷೇವಿಯರ್ ರವಿ, ಮಸ್ಕಿ ಶಾಸಕ ಆರ್. ಬಸನಗೌಡ ತುರುವಿಹಾಳ, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಹಾಗೂ ಮಸ್ಕಿ ಪಿಎಸ್‌ಐ ರಂಗಯ್ಯ ಕೆ. ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗಂಗಾವತಿಯ ಹಜರತ್ ಮೌಲಾನಾ ಮುಫ್ತಿ ಅಫ್ಜಲ್ ಹುಸೇನ್ ಸಾಬ್ ರಣಾದಿ ವಖಾಸ್ಥಿ ಅವರು ವಹಿಸಲಿದ್ದಾರೆ.

ಧಾರ್ಮಿಕ ಹಾಗೂ ಸಾಮಾಜಿಕ ಸಂದೇಶ ಕಾರ್ಯಕ್ರಮದಲ್ಲಿ ಶ್ರೀ ಮಹಾಂತ ಸ್ವಾಮಿ, ಮುದಗಲ್ ಕಲ್ಯಾಣ ಆಶ್ರಮ, ತಿಮ್ಮಾಪುರ, ಪಂಪಾಪತಿ ಹೂಗಾರ್ ಹಾಗೂ ಫಾರೂಖ್ ಅಹ್ಮದ್ ಸಖಾಫಿ, ಇಳಕಲ್ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಪ್ರವಾದಿ ಮುಹಮ್ಮದ್ ಅವರ ಬದುಕು ಮತ್ತು ಬೋಧನೆಗಳಲ್ಲಿ ಅಡಕವಾಗಿರುವ ಮಾನವೀಯತೆ, ಪರಸ್ಪರ ಗೌರವ, ಬಡವರು ಹಾಗೂ ದುರ್ಬಲರ ಬಗ್ಗೆ ಕಾಳಜಿ, ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡುವ ಸಂದೇಶಗಳನ್ನು ಕಾರ್ಯಕ್ರಮದ ಮೂಲಕ ಜನ–ರಿಗೆ ತಲುಪಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಇಂದಿನ ಸಮಾಜದಲ್ಲಿ ಪರಸ್ಪರ ಪ್ರೀತಿ, ಸಹೋದರತ್ವ, ಸೌಹಾರ್ದತೆ ಮತ್ತು ಶಾಂತಿಯ ಅಗತ್ಯ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ವಿವಿಧ ಸಮುದಾಯಗಳ ಧರ್ಮಗುರುಗಳು ಹಾಗೂ ಗಣ್ಯರು ಒಂದೇ ವೇದಿಕೆಯಲ್ಲಿ ಭಾಗವಹಿಸಿ ಮಾನವೀಯ ಮೌಲ್ಯಗಳ ಕುರಿತು ಸಂದೇಶ ನೀಡುವುದು ಕಾರ್ಯಕ್ರಮದ ವಿಶೇಷತೆಯಾಗಿದೆ.

ಸಾರ್ವಜನಿಕರಿಗೆ ಆಹ್ವಾನ ಸೀರತ್ ಸಂದೇಶ ಕಾರ್ಯಕ್ರಮವು ಎಲ್ಲ–ರಿಗೂ ಮುಕ್ತವಾಗಿದ್ದು, ಧರ್ಮ, ಜಾತಿ, ಭಾಷೆಯ ಭೇದವಿಲ್ಲದೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಮೀ ಉಲಮಾ–ವ–ಹಾಫೀಜ್ ಮಸ್ಕಿ ತಾಲೂಕು ಸಮಿತಿ ಮನವಿ ಮಾಡಿದೆ. ಪ್ರವಾದಿ ಮುಹಮ್ಮದ್ ಅವರ ಜೀವನಾದರ್ಶಗಳನ್ನು ತಿಳಿದುಕೊಳ್ಳುವುದರ ಜೊತೆಗೆ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಮಹತ್ವ ಪಡೆದುಕೊಂಡಿದೆ ಎಂದು ಆಯೋಜ–ಕರು ತಿಳಿಸಿದ್ದಾರೆ. ಸ್ಥಳ: ಭಾರತ ಫಂಕ್ಷನ್ ಹಾಲ್, ಬಳಗಾನೂರು ರಸ್ತೆ, ಮಸ್ಕಿ ದಿನಾಂಕ: ಸೆಪ್ಟೆಂಬರ್ 9 ಸಮಯ: ಸಂಜೆ 6.30

## ವಚನ ದರ್ಶನ

ನುಡಿದರೆ ಮುತ್ತಿನ ಹಾರದಂತಿರಬೇಕು,ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು,ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು.ನುಡಿಯೊಳಗಾಗಿ ನಡೆಯದಿದ್ದರೆ,ಕೂಡಲಸಂಗಮದೇವನೆಂತೊಲಿವನಯ್ಯ?

12ನೆಯ ಶತಮಾನದ ಸಾಮಾಜಿಕ ಕ್ರಾಂತಿಕಾರಿ, ವಿಶ್ವಗುರು ಬಸವಣ್ಣನವರು ಬರೆದ ಅತ್ಯಂತ ಜನಪ್ರಿಯ ಹಾಗೂ ಮಾರ್ಗದರ್ಶಕವಾದ ವಚನ ಸಾಹಿತ್ಯದ ಒಂದು ಭಾಗವಾಗಿದೆ. ಮನುಷ್ಯನ ಮಾತು ಮತ್ತು ನಡತೆ ಹೇಗಿರಬೇಕು ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ಅತ್ಯಂತ ಮಾರ್ಮಿಕವಾಗಿ ವಿವರಿಸಿದ್ದಾರೆ.

ನುಡಿದರೆ ಮುತ್ತಿನ ಹಾರದಂತಿರಬೇಕು.ನಮ್ಮ ಮಾತುಗಳು ಮುತ್ತಿನ ಹಾರದಂತೆ ಸುಂದರ, ಆಕರ್ಷಕ ಮತ್ತು ಮೌಲ್ಯಯುತವಾಗಿರಬೇಕು. ಮಾತಿನಲ್ಲಿ ಕೋಮಲತೆ ಮತ್ತು ಸೌಜನ್ಯವಿರಬೇಕು.

ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನಾವು ಆಡುವ ಮಾತುಗಳು ಕತ್ತಲೆಯನ್ನು ದೂರಾಗಿಸುವ ಮಾಣಿಕ್ಯದ ಬೆಳಕಿನಂತೆ ಇತರರ ಜೀವನಕ್ಕೆ ದಾರಿದೀಪವಾಗಬೇಕು ಮತ್ತು ಜ್ಞಾನವನ್ನು ಹರಡಬೇಕು.

ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. ಮಾತುಗಳು ಸ್ಫಟಿಕದ ಕಡ್ಡಿಯಂತೆ ಅತ್ಯಂತ ಸ್ಪಷ್ಟ, ನೇರ ಹಾಗೂ ಪಾರದರ್ಶಕವಾಗಿರಬೇಕು. ಅದರಲ್ಲಿ ಯಾವುದೇ ಕಪಟತನ ಅಥವಾ ಅಸ್ಪಷ್ಟತೆ ಇರಬಾರದು.

ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು. ನಮ್ಮ ಸತ್ಯವಾದ ನುಡಿಗಳನ್ನು ಕೇಳಿ ಸ್ವತಃ ಭಗವಂತನೇ ಲಿಂಗ ಮೆಚ್ಚುಗೆ ವ್ಯಕ್ತಪಡಿಸುವಂತಿರಬೇಕು.

ನುಡಿಯೊಳಗಾಗಿ ನಡೆಯದಿದ್ದರೆ. ನಾವು ಆಡುವ ಮಾತಿನಂತೆ ನಮ್ಮ ಜೀವನದ ನಡತೆ ಇಲ್ಲದಿದ್ದರೆ, ಆ ದೇವ ಕೃತಜ್ಞನಾಗುವುದಿಲ್ಲ. ಅಂದರೆ, ನುಡಿ ಮತ್ತು ನಡೆ ಒಂದೇ ಆಗಿರಬೇಕು ಕಥನಿ ಮತ್ತು ಕರನಿ ಒಂದಾಗಿರಬೇಕು ಇಲ್ಲದಿದ್ದರೆ ದೇವ ಒಲಿಯಲಾರ. ಇಂಥಹ ವಚನಗಳು ನಮಗೆ ದಾರಿದೀಪವಾಗಲಿ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

# ಶ್ರಾವಣ ಮಾಸದ ನಾಲ್ಕನೇ ಸೋಮವಾರ: ಲಿಂಗದಹಳ್ಳಿ ಶ್ರೀ ಪರಮಾನಂದ ದೇವರ ಪಲ್ಲಕ್ಕಿ ಉತ್ಸವ ಅದ್ದೂರಿ

# ಕೃಷ್ಣಾನದಿ ತೀರದಲ್ಲಿ ಗಂಗಾಪೂಜೆ, ಆರತಿ; ಸಾವಿರಾರು ಭಕ್ತರಿಂದ ದೇವರ ದರ್ಶನ

❑ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಶ್ರಾವಣ ಮಾಸದ ನಾಲ್ಕನೇ ಸೋಮವಾರದ ಅಂಗವಾಗಿ ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ಲಿಂಗದಹಳ್ಳಿ ಗ್ರಾಮದ ಶ್ರೀ ಪರಮಾನಂದ ದೇವರ ಜಾತ್ರಾ ಮಹೋತ್ಸವ ಹಾಗೂ ಪಲ್ಲಕ್ಕಿ ಉತ್ಸವ ಸೋಮವಾರ ಶ್ರದ್ಧಾಭಕ್ತಿಯಿಂದ ಹಾಗೂ ಅದ್ದೂರಿಯಾಗಿ ಜರುಗಿತು.**

ಶ್ರೀ ಪರಮಾನಂದ ದೇವರನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ದೇವಸ್ಥಾನದಿಂದ ಸಮೀಪದ ಕೃಷ್ಣಾ ನದಿಯವರೆಗೆ ಭವ್ಯ ಮೆರವಣಿಗೆ ನಡೆಸಲಾಯಿತು. ನದಿ ತೀರದಲ್ಲಿ ಭಕ್ತರು ಗಂಗಾಪೂಜೆ, ಕೃಷ್ಣಾ ಆರತಿ ಹಾಗೂ ವಿಶೇಷ ಪೂಜೆಗಳನ್ನು ನೆರವೇರಿಸಿದರು. ಬಳಿಕ ಪಲ್ಲಕ್ಕಿ ಮೆರವಣಿಗೆಯು ಕೃಷ್ಣಾ ನದಿ ತೀರದಿಂದ ಪರಮಾನಂದ ದೇವರ ಗುಡ್ಡದಲ್ಲಿರುವ ದೇವಸ್ಥಾನದವರೆಗೆ ಸಾಗಿತು.



ಮೆರವಣಿಗೆಯಲ್ಲಿ ಮಹಿಳೆಯರು ಕುಂಭ?ಕಳಸಗಳನ್ನು ಹೊತ್ತು ಪಾಲ್ಗೊಂಡರು. ಡೊಳ್ಳು ಕುಣಿತ ಹಾಗೂ ಬಾಜಾ?ಭಜಂತ್ರಿ ತಂಡಗಳ ಪ್ರದರ್ಶನ ಭಕ್ತರ ಗಮನ ಸೆಳೆಯಿತು. ಹಲವು ಭಕ್ತರು ಶಿವಮಾಲೆ ಧರಿಸಿ ಪಾದಯಾತ್ರೆಯ ಮೂಲಕ ನದಿ ತೀರಕ್ಕೆ ತೆರಳಿ ಗಂಗಾಮಾತೆಗೆ ಪೂಜೆ ಸಲ್ಲಿಸಿದರು. ದೇವಸ್ಥಾನದಲ್ಲಿ ವಿಶೇಷ ಪೂಜೆ, ರುದ್ರಾಭಿಷೇಕ, ಮಹಾಭಿಷೇಕ ಹಾಗೂ ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಮಲ್ಲಯ್ಯ ಸ್ವಾಮಿಗಳ ಸಾನಿಧ್ಯದಲ್ಲಿ ನಡೆದ ಪೂಜಾ ಕಾರ್ಯಕ್ರಮಗಳಲ್ಲಿ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿ ದೇವರ ದರ್ಶನ ಪಡೆದರು.

ಜಾಲಹಳ್ಳಿ ಹೋಬಳಿ ಸೇರಿದಂತೆ ದೇವದುರ್ಗ ತಾಲೂಕಿನ ವಿವಿಧ ಗ್ರಾಮಗಳು ಹಾಗೂ ರಾಯಚೂರು ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು. ಉಪವಾಸ ವ್ರತ ಕೈಗೊಂಡಿದ್ದ ಭಕ್ತರು ರಾತ್ರಿ ಜಾಗರಣೆ ನಡೆಸಿ ವಿಶೇಷ ಪೂಜೆ ಸಲ್ಲಿಸಿದರು.

ಶ್ರೀ ಪರಮಾನಂದ ದೇವಸ್ಥಾನದ ಜನಕಲ್ಯಾಣ ಟ್ರಸ್ಟ್‌ನ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಗ್ರಾಮದ ಗುರು?ಹಿರಿಯರು ಹಾಗೂ ಲಿಂಗದಹಳ್ಳಿ ಗ್ರಾಮಸ್ಥರ ನೇತೃತ್ವದಲ್ಲಿ ಜಾತ್ರಾ ಮಹೋತ್ಸವ ಮತ್ತು ಪಲ್ಲಕ್ಕಿ ಉತ್ಸವವನ್ನು ಯಶಸ್ವಿಯಾಗಿ ನಡೆಸಲಾಯಿತು.

# ಕಂಪ್ಲಿಯ ಧೃತಿ ಬ್ಯಾಂಕಿನ ಸೌಹಾರ್ದ ಸಹಕಾರಿ ಸಂಘದ 6ನೇ ವಾರ್ಷಿಕ ಮಹಾಸಭೆ ಯಶಸ್ವಿಯಾಗಿ ಜರಗಿತು

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಪ್ರಸಕ್ತ ಸಾಲಿನಲ್ಲಿ ಸಹಕಾರಿ ಸಂಘಗಳು ಸದಸ್ಯರ ಆರ್ಥಿಕ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಧೃತಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀಮತಿ ಐ. ವಿಜಯ ತಿಳಿಸಿದರು.**

ಪಟ್ಟಣದ ಮಾರಮ್ಮ ಗುಡಿ ಕ್ಯಾಂಪ್ ಮುಖ್ಯ ರಸ್ತೆಯಲ್ಲಿರುವ ಸಂಘದ ಕಚೇರಿಯಲ್ಲಿ ಭಾನುವಾರ (ಸೆ. 6) ಹಮ್ಮಿಕೊಳ್ಳಲಾಗಿದ್ದ ಧೃತಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ 6ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸದಸ್ಯರ ನಿರಂತರ ಸಹಕಾರ ಹಾಗೂ ಆಡಳಿತ ಮಂಡಳಿಯ ಪಾರದರ್ಶಕ ಆಡಳಿತದಿಂದಾಗಿ ಸಂಘವು ಉತ್ತಮ ಪ್ರಗತಿ ಸಾಧಿಸುತ್ತಿದೆ ಎಂದರು. ಇದೇ ಸಂದರ್ಭದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ (CEO) ಶ್ರೀ ಐ. ಚಂದ್ರಶೇಖರ ರೆಡ್ಡಿ ಅವರು ಮಾತನಾಡಿ, 2025-26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.

ಸಭೆಯಲ್ಲಿ ಸಂಘದ ಪ್ರಗತಿ ಹಾಗೂ ಮುಂದಿನ ಯೋಜನೆಗಳ ಕುರಿತು ಸುದೀರ್ಘ ಚರ್ಚೆ ನಡೆಸಿ, ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಸಂಘದ ಕಳೆದ ಸಾಲಿನ ಆರ್ಥಿಕ ಪ್ರಗತಿಯನ್ನು ಸಭೆಯ ಗಮನಕ್ಕೆ ತರಲಾಯಿತು. ಸಂಘವು 2025-26ನೇ ಸಾಲಿನಲ್ಲಿ ಒಟ್ಟು ?31,14,274/- ಆದಾಯ ಗಳಿಸಿದ್ದು, ?27,06,436/- ವೆಚ್ಚ ಭರಿಸಿದೆ ಎಂದು ಆಡಳಿತ ಮಂಡಳಿ ತಿಳಿಸಿತು. ಈ ವಾಸ್ತವಿಕ ಆಯವ್ಯಯದ ವಿವರಗಳನ್ನು ಹಾಗೂ 2025-26ನೇ ಸಾಲಿನ ಆಡಿಟ್ ವರದಿಯ 'ಆಢಾವೆ ಪತ್ರಿಕೆ' ಮತ್ತು 'ಲಾಭ-ಹಾನಿ' ಪಟ್ಟಿಯನ್ನು ಸರ್ವಸದಸ್ಯರ ಸಭೆಯು ಪರಿಶೀಲಿಸಿ ಏಕಕಂಠದಿಂದ ಅನುಮೋದಿಸಿತು.

ರೂ. 4.07 ಲಕ್ಷ ನಿವ್ವಳ ಲಾಭ; 6% ಡಿವಿಡೆಂಡ್:ಪ್ರಸ್ತುತ 2025-26ನೇ ಹಣಕಾಸು ಸಾಲಿನಲ್ಲಿ ಸಹಕಾರಿ ಸಂಘವು ಒಟ್ಟು ರೂ. 4,07,838/- ಗಳ ಭರ್ಜರಿ ನಿವ್ವಳ ಲಾಭ ಗಳಿಸುವಲ್ಲಿ ಯಶಸ್ವಿಯಾಗಿದೆ. ಲಾಭದಲ್ಲಿ ಶೇ. 52 ರಷ್ಟನ್ನು ವಿವಿಧ ಕಡ್ಡಾಯ ನಿಧಿಗಳಿಗೆ ವರ್ಗಾಯಿಸಲಾಗಿದೆ. ನಿಧಿಗಳ ವರ್ಗಾವಣೆಯ ನಂತರ ಸಂಘದ ಬಳಿ ರೂ. 1,95,762/- ಉಳಿಕೆಯಾಗಿದ್ದು, ಈ ಬಾರಿ ತನ್ನ ಎಲ್ಲಾ ಶೇರುದಾರರಿಗೆ ಶೇ. 6% ರಷ್ಟು ಲಾಭಾಂಶ (Dividend) ಹಂಚಿಕೆ ಮಾಡಲು ಆಡಳಿತ ಮಂಡಳಿಯು ಸಭೆಯ ಪರಿಶೀಲನೆಗೆ ಪ್ರಸ್ತಾಪಿಸಿದೆ.2026-27ನೇ ಸಾಲಿಗೆ ರೂ. 60 ಲಕ್ಷ ಮುಂಬರುವ 2026-27ನೇ ಸಾಲಿನ ವರ್ಷಕ್ಕೆ ಸಂಘದ ವತಿಯಿಂದ ಸಿದ್ಧಪಡಿಸಲಾದ ವಾರ್ಷಿಕ ಆಯ-ವ್ಯಯದ (ಬಜೆಟ್) ಅಂದಾಜನ್ನು





ಮಹಾಸಭೆಯ ಅಂಗೀಕಾರಕ್ಕೆ ಮಂಡಿಸಲಾಗುತ್ತಿದೆ. ಈ ಹೊಸ ಸಾಲಿನಲ್ಲಿ ಸಹಕಾರಿ ಸಂಘಕ್ಕೆ ಅಂದಾಜು ರೂ. 60 ಲಕ್ಷ ಆದಾಯ ಹರಿದುಬರಲಿದ್ದು, ಒಟ್ಟು ರೂ. 48 ಲಕ್ಷ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ಈ ಮೂಲಕ ಮುಂಬರುವ ವರ್ಷದಲ್ಲೂ ಸಂಘವು ಲಾಭದಾಯಕ ಹಾದಿಯಲ್ಲಿ ಮುನ್ನಡೆಯುವ ವಿಶ್ವಾಸ ವ್ಯಕ್ತಪಡಿಸಿದೆ.

ಈ ಸಂದರ್ಭದಲ್ಲಿ ನಿರ್ದೇಶಕರಾದ ಆರ್ ರಾಜಶೇಖರ್, ಬಿ. ಉಮೇಶ, ವೀರನಗೌಡ ಜಿ, ಐ. ಶರಣಗೌಡ, ಬಳ್ಳಾರಿ ಪುಷ್ಪಾವತಿ, ವ್ಯವಸ್ಥಾಪಕರಾದ ವಿಶ್ವನಾಥ ಸಿಬ್ಬಂದಿ ಐಶ್ವರ್ಯ, ಸೇರಿದಂತೆ ಅರ್ಹ ಸರ್ವ ಸದಸ್ಯರು ಬಹುಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಸಭೆಯ ಆರಂಭದಲ್ಲಿ ದೇವತಾ ಪ್ರಾರ್ಥನೆಯೊಂದಿಗೆ ಅತಿಥಿಗಳನ್ನು ಸ್ವಾಗತಿಸಲಾಯಿತು. ಕೊನೆಯಲ್ಲಿ ವಂದನಾರ್ಪಣೆಯೊಂದಿಗೆ ಸಭೆಯು ಯಶಸ್ವಿಯಾಗಿ ಮುಕ್ತಾಯಗೊಂಡಿತು.

## ಶಿಕ್ಷಣ ಕ್ಷೇತ್ರದ ಸೇವೆಗೆ ರಜಿಯಾಬಾನು ಅತ್ತಾರ್ ಅವರಿಗೆ 'ಜ್ಯೋತಿಬಾ ಪುಲೆ ಪ್ರಶಸ್ತಿ'

❑ ನೈಜ್ಯ ದೆಸೆ ನ್ಯೂಸ್

**ಮುಧೋಳ: ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅಮೂಲ್ಯ ಸೇವೆ ಹಾಗೂ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ನೀಡಿದ ಮಹತ್ವದ ಕೊಡುಗೆಯನ್ನು ಗುರುತಿಸಿ, ಶ್ರೀಮತಿ ರಜಿಯಾಬಾನು ಅತ್ತಾರ್ ಅವರಿಗೆ ಪ್ರತಿಷ್ಠಿತ 'ಜ್ಯೋತಿಬಾ ಪುಲೆ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ (ರಿ), ಬೆಂಗಳೂರು ಮುಧೋಳ ತಾಲೂಕು ಘಟಕದ ವತಿಯಿಂದ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.**



ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಾ ವಿದ್ಯಾರ್ಥಿಗಳಲ್ಲಿ ಜ್ಞಾನ, ಸಂಸ್ಕಾರ ಮತ್ತು ಉತ್ತಮ ಮೌಲ್ಯಗಳನ್ನು ಬೆಳೆಸುವಲ್ಲಿ ರಜಿಯಾಬಾನು ಅತ್ತಾರ್ ಅವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ. ಶಿಕ್ಷಕರ ಸೇವೆ ಕೇವಲ ಪಾಠ ಬೋಧನೆಗೆ ಸೀಮಿತವಾಗದೆ, ಮಕ್ಕಳ ವ್ಯಕ್ತಿತ್ವ ವಿಕಸನ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ರಜಿಯಾಬಾನು ಅತ್ತಾರ್ ಅವರ ಸಮರ್ಪಣಾ ಮನೋಭಾವ ಮತ್ತು ಶಿಕ್ಷಣ ಸೇವೆಯನ್ನು ಪ್ರಶಸ್ತಿ ಮೂಲಕ ಗೌರವಿಸಿರುವುದು ಶ್ಲಾಘನೀಯವಾಗಿದೆ. 'ಜ್ಯೋತಿಬಾ ಪುಲೆ ಪ್ರಶಸ್ತಿ' ಪಡೆದ ರಜಿಯಾಬಾನು ಅತ್ತಾರ್ ಅವರನ್ನು ಶಿಕ್ಷಕರು, ಸಹೋದ್ಯೋಗಿಗಳು ಹಾಗೂ ಹಿತೈಷಿಗಳು ಅಭಿನಂದಿಸಿ, ಮುಂದಿನ ದಿನಗಳಲ್ಲಿಯೂ ಶಿಕ್ಷಣ ಕ್ಷೇತ್ರದಲ್ಲಿ ಇನ್ನಷ್ಟು ಸೇವೆ ಸಲ್ಲಿಸುವಂತಾಗಲಿ ಎಂದು ಶುಭ ಹಾರೈಸಿದ್ದಾರೆ.

# ಸತ್ಯ ನಂದೀಶ ಜನ್ಮದಿನ ಅರಳಹಳ್ಳಿ ಸರ್ಕಾರಿ ಶಾಲೆಗೆ ಅಡುಗೆ ಸಾಮಗ್ರಿ ಹಾಗೂ ಪತ್ರಿಕೆ ವಿತರಕರಿಗೆ ಸೈಕಲ್ ವಿತರಣೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಅರಳಹಳ್ಳಿ ಗ್ರಾಮದ ಶ್ರೀಮತಿ ಈಶ್ವರಮ್ಮ ಗಂಡ ಅಮರಣ್ಣ ಪೋಲಬಾವಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಸತ್ಯ ನಂದೀಶ್ ಇವರ ಜನ್ಮದಿನಾಚರಣೆ ಅಂಗವಾಗಿ ಮೋಹನ್ ರಾವ್ ಬಾಬು ಎಂಬುವವರು ತಮ್ಮ ಮಗನ ಸ್ಮರಣಾರ್ಥವಾಗಿ ವಿದ್ಯಾರ್ಥಿಗಳಿಗೆ ಅಡುಗೆ ಮಾಡುವ ಸಾಮಗ್ರಿಗಳು ಹಾಗೂ ದಿನ ನಿತ್ಯ ಮಳೆ, ಚಳಿ, ಗಾಳಿ ಎನ್ನದೆ ಬೆಳಗಿನ ಜಾವಕೆ ಮನೆಗಳಿಗೆ ಪತ್ರಿಕೆ ಹಂಚುವ 11 ಜನ ಬಡ ವಿತರಕರಿಗೆ ಸೈಕಲ್ ವಿತರಣೆ ಮಾಡಿ ಮಾನವೀಯತೆ ಮೆರೆದರು.**



ಬಿಜೆಪಿ ಮುಖಂಡ ಕೆ.ಕರಿಯಪ್ಪ ಅಧ್ಯಕ್ಷತೆ ವಹಿಸಿ ವಿತರಕರಾದ ಸಿಂಧನೂರಿನ ಸೋಮನಾಥ, ಮಲ್ಲಿಕಾರ್ಜುನ, ಜಾಲಿಹಾಳದ ನಾಗರಾಜ, ಗುರುಪ್ರಸಾದ್, ತುರ್ವಿಹಾಳದ ಸಮೀರ್, ಶರಣಬಸವ, ರಂಗಶೆಟ್ಟಿ, ಆಕಾಶಗೌಡ, ರಾಘವೇಂದ್ರ, ಆನಂದಕುಮಾರ, ವಿಜಯಕುಮಾರ, ಇವರಿಗೆ ಸೈಕಲ್ ಹಾಗೂ ಶಾಲೆಗೆ ಅಡುಗೆ ಸಾಮಗ್ರಿಗಳನ್ನು ವಿತರಣೆ ಮಾಡಿದರು. ಈ ವೇಳೆ: ಎಸ್.ಡಿಎಮ್.ಸಿ ಅಧ್ಯಕ್ಷ ಮಾಬುಸಾಬ್, ಸದಸ್ಯರು, ಶಿಕ್ಷಕರು, ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಶ್ರಾವಣ ಮಾಸದ ಶುಭ ಸೋಮವಾರದಂದು ಆದರ್ಶ ದಂಪತಿಗಳಿಗೆ ಕಾರುಣ್ಯ ಕುಟುಂಬದಿಂದ ಆಶೀರ್ವಾದ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಶ್ರಾವಣ ಮಾಸದ ಶುಭ ಸೋಮವಾರದ ಅಂಗವಾಗಿ ಕರುಣೆಯ ಹಾಗೂ ಕಾರುಣ್ಯದ ಸಂಕೇತವಾಗಿರುವ ಕಾರುಣ್ಯ ಕುಟುಂಬದ ವತಿಯಿಂದ ಆದರ್ಶ ದಂಪತಿಗಳಾದ ಶ್ರೀಮತಿ ರೇಣುಕಾ ಹಾಗೂ ಶ್ರೀ ಪಂಪಾಪತಿ ಹೂವಿನಬಾವಿ, ವರದಿಗಾರರು, ಸಂಜೆವಾಣಿ ಕನ್ನಡ ದಿನಪತ್ರಿಕೆ, ಅವರನ್ನು ಆತ್ಮೀಯವಾಗಿ ಆಶೀರ್ವದಿಸಿ ಗೌರವಿಸಲಾಯಿತು.**



ಈ ಸಂದರ್ಭದಲ್ಲಿ ದಂಪತಿಗಳ ದಾಂಪತ್ಯ ಜೀವನ ಸುಖ, ಶಾಂತಿ, ಸಮೃದ್ಧಿಯಿಂದ ಕೂಡಿರಲಿ ಹಾಗೂ ಅವರ ಕುಟುಂಬದಲ್ಲಿ ಸದಾ ನೆಮ್ಮದಿ, ಆರೋಗ್ಯ ಮತ್ತು ಸಂತೋಷ ನೆಲೆಸಿರಲಿ ಎಂದು ಕಾರುಣ್ಯ ಕುಟುಂಬದ ವತಿಯಿಂದ ಹಾರೈಸಲಾಯಿತು. ಶ್ರಾವಣ ಮಾಸವು ಭಕ್ತಿ, ಧಾರ್ಮಿಕ ಆಚರಣೆ ಹಾಗೂ ಶುಭಕಾರ್ಯಗಳಿಗೆ ವಿಶೇಷ ಮಹತ್ವ ಹೊಂದಿದ್ದು, ಈ ಪವಿತ್ರ ಸಂದರ್ಭದಲ್ಲಿ ಆದರ್ಶ ದಂಪತಿಗಳನ್ನು ಗೌರವಿಸಿ ಆಶೀರ್ವದಿಸಿರುವುದು ಕುಟುಂಬದ ಸದಸ್ಯರಲ್ಲಿ ಸಂತಸ ಮೂಡಿಸಿತು. ಕಾರ್ಯಕ್ರಮದಲ್ಲಿ ಕಾರುಣ್ಯ ಕುಟುಂಬದ ಸದಸ್ಯರು ಹಾಗೂ ಹಿತೈಷಿಗಳು ಉಪಸ್ಥಿತರಿದ್ದು, ದಂಪತಿಗಳಿಗೆ ಶುಭಾಶಯಗಳನ್ನು ಸಲ್ಲಿಸಿದರು.

# ಜಾಲಹಳ್ಳಿಯಲ್ಲಿ DYFI 10ನೇ ತಾಲೂಕು ಸಮ್ಮೇಳನ ಅದ್ದೂರಿ

## ಯುವಕರು ಸಂವಿಧಾನ ವಿರೋಧಿ ಶಕ್ತಿಗಳ ವಿರುದ್ಧ ಸಂಘಟಿತರಾಗಿ ಹೋರಾಡಬೇಕು: ಗಣ್ಯರ ಕರೆ

❑ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಶ್ರಮಿಕ ಭವನದಲ್ಲಿ ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ (DYFI) ಸಂಘಟನೆಯ 10ನೇ ತಾಲೂಕು ಸಮ್ಮೇಳನ ಸೋಮವಾರ ಅದ್ದೂರಿಯಾಗಿ ನಡೆಯಿತು.**

ಉದ್ಘಾಟಕರಾಗಿ ಆಗಮಿಸಿದ ವಕೀಲರಾದ ರಂಗಪ್ಪ ಹೆದ್ದೇರಿ ಅವರು ಸಸಿಗೆ ನೀರು ಹಾಕುವ ಮೂಲಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ, ಯುವಜನರು ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನಾತ್ಮಕ ಮೌಲ್ಯಗಳನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಸಂವಿಧಾನದ ಆಶಯಗಳಿಗೆ ಧಕ್ಕೆ ತರುವ ಶಕ್ತಿಗಳ ವಿರುದ್ಧ ಯುವಕರು ಸಂಘಟಿತರಾಗಿ ಹೋರಾಡುವ ಅಗತ್ಯವಿದೆ ಎಂದು ಹೇಳಿದರು. ಆಜಈಖ ಬೆಳೆದು ಬಂದ ಹಾದಿಬಗ್ಗೆ ಮಾತನಾಡಿ ದ ಉದ್ಘಾಟಕರು 1980ರ ನವೆಂಬರ್‌ನಲ್ಲಿ ಪಂಜಾಬ್‌ನ ಲುಧಿಯಾನಾ ಜಿಲ್ಲೆಯ ಶಹೀದ್ ಕರ್ತಾರ್ ಸಿಂಗ್ ಸರಾಭಾ ಗ್ರಾಮದಲ್ಲಿ ನಡೆದ ಸಂಸ್ಥಾಪನಾ ಸಮ್ಮೇಳನದ ಮೂಲಕ ಆಜಈಖ ಅಸ್ತಿತ್ವಕ್ಕೆ ಬಂದಿತು. ನಂತರ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಸಂಘಟನೆಯು ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ತನ್ನ ಸಂಘಟನಾ ಜಾಲವನ್ನು ವಿಸ್ತರಿಸಿಕೊಂಡು, ಯುವಜನರ ಉದ್ಯೋಗ, ಶಿಕ್ಷಣ, ಸಾಮಾಜಿಕ ನ್ಯಾಯ ಹಾಗೂ ಜನಪರ ಸಮಸ್ಯೆಗಳ ಕುರಿತು ಹೋರಾಟಗಳನ್ನು ನಡೆಸಿಕೊಂಡು ಬಂದಿದೆ.

ಮಾದಕ ವಸ್ತುಗಳು ಹಾಗೂ ಅಕ್ರಮ ಚಟುವಟಿಕೆಗಳ ವಿರುದ್ಧ ಜಾಗೃತಿ ಮೂಡಿಸುವುದು, ರಸ್ತೆ, ಕುಡಿಯುವ ನೀರು, ಚರಂಡಿ ಸೇರಿದಂತೆ ಸಾರ್ವಜನಿಕ ಮೂಲಸೌಕರ್ಯಗಳ ಸಮಸ್ಯೆಗಳ ಕುರಿತು ಧ್ವನಿ ಎತ್ತುವುದು ಹಾಗೂ ಮಹಿಳೆಯರು ಮತ್ತು ದುರ್ಬಲ ವರ್ಗಗಳ ಮೇಲಿನ ಅನ್ಯಾಯದ




ಜಿಲ್ಲಾ ಸಿಪಿಐ(JA) ಪ್ರಧಾನ ಕಾರ್ಯದರ್ಶಿ ನರಸಣ್ಣ ನಾಯಕ ಮಾತನಾಡಿ, ನಿರುದ್ಯೋಗ ನಿವಾರಣೆ, ಸರ್ಕಾರಿ ಹುದ್ದೆಗಳ ಭರ್ತಿ, ಶಿಕ್ಷಣದ ಹಕ್ಕು, ಕಾರ್ಮಿಕರ ಹಕ್ಕುಗಳ ರಕ್ಷಣೆ, ಬೆಲೆ ಏರಿಕೆ ನಿಯಂತ್ರಣ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಯುವಜನರು ಹೋರಾಟದ ಮುಂಚೂಣಿಯಲ್ಲಿ ನಿಲ್ಲಬೇಕು ಎಂದು ಕರೆ ನೀಡಿದರು.
ಕೇಂದ್ರ ಸರ್ಕಾರವು ನಿರುದ್ಯೋಗಿ ಯುವಕರ ಭವಿಷ್ಯದ ದೃಷ್ಟಿಯಿಂದ ಸಮರ್ಪಕ ಯೋಜನೆಗಳನ್ನು ರೂಪಿಸುವಲ್ಲಿ ವಿಫಲವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ವಿರುದ್ಧ ಹೋರಾಡುವುದು ಯುವಜನರ ಪ್ರಮುಖ ಜವಾಬ್ದಾರಿಯಾಗಿದೆ ಎಂದರು.

ಜಾತಿ ಧರ್ಮದ ಹೆಸರಿನಲ್ಲಿ ದ್ವೇಷ ಸೃಷ್ಟಿಸುವವರ ವಿರುದ್ಧ ಧ್ವನಿ ಎತ್ತಲಿ ಪತ್ರಕರ್ತ ಗಿರಿಯಪ್ಪ ಪೂಜಾರಿ ಮಾತನಾಡಿ, ಇಂದಿನ ದಿನಗಳಲ್ಲಿ ಜಾತಿ?ಜಾತಿಗಳ ನಡುವೆ ಹಾಗೂ ಧರ್ಮಗಳ ನಡುವೆ ದ್ವೇಷ ಮತ್ತು ವಿಭಜನೆಯ ವಾತಾವರಣ ಸೃಷ್ಟಿಸುವ ಪ್ರಯತ್ನಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಯುವಕರು ಸಂವಿಧಾನದ ಆಶಯಗಳನ್ನು ಅರ್ಥಮಾಡಿಕೊಂಡು, ದ್ವೇಷ ಮತ್ತು ವಿಭಜನೆಯ ರಾಜಕಾರಣದ ವಿರುದ್ಧ ಪ್ರಜಾಸತ್ತಾತ್ಮಕವಾಗಿ ಧ್ವನಿ ಎತ್ತಬೇಕು ಎಂದು ಹೇಳಿದರು.

ಯುವಕರು ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ನ್ಯಾಯದಂತಹ ಮೂಲಭೂತ ವಿಚಾರಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಸಮಾಜದಲ್ಲಿ ಸಮಾನತೆ, ಸಹಬಾಳ್ವೆ ಹಾಗೂ ಸೌಹಾರ್ದತೆ ಬೆಳೆಸುವಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ ಎಂದರು. ಸಮ್ಮೇಳನದ ಪ್ರಾಸ್ತಾವಿಕ ಭಾಷಣದಲ್ಲಿ ಅತಿಥಿಯಾಗಿ ಆಗಮಿಸಿದ ಆಜಈಖ ಜಿಲ್ಲಾ ಸಂಚಾಲಕ ಹಾಗೂ ಮುಖಂಡ ರಾಜು ನಾಯಕ ಅವರು ಸಂಘಟನೆಯ ಮುಂದಿನ ಕಾರ್ಯಚಟುವಟಿಕೆಗಳು, ಸಂಘಟನಾ ವಿಸ್ತರಣೆ ಹಾಗೂ ಯುವಜನರ ಸಮಸ್ಯೆಗಳ ಕುರಿತು ಕೈಗೊಳ್ಳಬೇಕಾದ ಹೋರಾಟಗಳ ರೂಪುರೇಷೆಗಳನ್ನು ವಿವರಿಸಿದರು.

ರಾಜ್ಯ ಕಾರ್ಮಿಕ ಮುಖಂಡ ಶಬ್ಬೀರ್ ಜಾಲಹಳ್ಳಿ ಅವರು ಅತಿಥಿಯಾಗಿ ಭಾಗವಹಿಸಿದ್ದರು.

ಸಮ್ಮೇಳನದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪತ್ರಕರ್ತ ಖಾಜಾ ಹುಸೇನ್ ಬಾಬಾ ಮಾತನಾಡಿ, ನಿರುದ್ಯೋಗ, ಶಿಕ್ಷಣ, ಬೆಲೆ ಏರಿಕೆ, ಸರ್ಕಾರಿ ಹುದ್ದೆಗಳ ನೇಮಕಾತಿ ಸೇರಿದಂತೆ ಯುವಜನರ ವಿವಿಧ ಸಮಸ್ಯೆಗಳಿಗೆ ಧ್ವನಿಯಾಗುವ ನಿಟ್ಟಿನಲ್ಲಿ ಆಜಈಖ ಕಾರ್ಯನಿರ್ವಹಿಸುತ್ತಿದೆ ಎಂದರು.
ಇಂದಿನ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ (ಂಖ) ಯುಗಕ್ಕೆ ಅನುಗುಣವಾಗಿ ಯುವಕರು ಶಿಕ್ಷಣದ ಜೊತೆಗೆ ಕೌಶಲ್ಯಾಭಿವೃದ್ಧಿಗೆ ಒತ್ತು ನೀಡಬೇಕು. ಂಖ ಸೇರಿದಂತೆ ಆಧುನಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ತರಬೇತಿ ಪಡೆದು ಉದ್ಯೋಗಾವಕಾಶಗಳನ್ನು ಹೆಚ್ಚಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಖಈಖ ಮುಖಂಡೆ ದಿಲ್ಲಿಷಾದ್ ಕಾರ್ಯಕ್ರಮ ನಿರೂಪಿಸಿದರು.

ಈ ಸಂದರ್ಭದಲ್ಲಿ ಆಜಈಖ ವಲಯ ಸಮಿತಿ ಅಧ್ಯಕ್ಷ ವೆಂಕಟೇಶ್ ಥ್ಯಾಪ್ಲಿ, ಕಾರ್ಯದರ್ಶಿ, ಮುಖಂಡರಾದ ಕೊಂಡಯ್ಯ ಗೊಸಲ್, ಖಈಖ ತಾಲೂಕು ಅಧ್ಯಕ್ಷ ಭಾಷಾ ಶಾನೆರ್ ದೊಡ್ಡಿ, ಕಾರ್ಯದರ್ಶಿ ಸಂತೋಷ ನಾಯಕ ಥ್ಯಾಪ್ಲಿ, ರಿಯಾಜ್ ಆರ್ತಿ, ಅಮೀರ್ ಪಟೇಲ್, ಗೋಪಿ ನಾಯಕ, ತಿಮ್ಮಣ್ಣ ಕಟ್ಟಿಮನಿ, ತಿಮ್ಮಣ್ಣ ಬೆಂಗಂಡಿ, ರಿಯಾಜ್ ಖುರೇಶಿ, ಮಲ್ಲು ಗೌಡೂರು, ಮಹೇಬೂಬ್ ಖುರೇಶಿ, ಲೋಹಿತ್ ಮೋದಿ, ಜಾವಿದ್ ಖುರೇಶಿ, ಮಕ್ಸುದ್ ಖುರೇಶಿ, ಲಿಂಗಯ್ಯ ಸುಣ್ಣದಕಲ್, ಯಲ್ಲಪ್ಪ ಸುಣ್ಣದಕಲ್, ಗೋಪಿ ಊಟಿ, ಶಿವು ಊಟಿ, ಅಬ್ರಹಾಂ ಕಮ್ಮಲದಿನ್ನಿ, ಶಿವರಾಜ್ ನಡಿಗೇರಿ ಸೇರಿದಂತೆ ಆಜಈಖ ಹಾಗೂ ಖಈಖಯ ನೂರಾರು ಕಾರ್ಯಕರ್ತರು ಮತ್ತು ಯುವಜನರು ಭಾಗವಹಿಸಿದ್ದರು.

ಸಮ್ಮೇಳನದಲ್ಲಿ ಯುವಜನರ ಹಕ್ಕುಗಳು, ಸ್ಥಳೀಯ ಸಮಸ್ಯೆಗಳು, ಸಂಘಟನೆಯ ಮುಂದಿನ ಕಾರ್ಯಚಟುವಟಿಕೆಗಳು ಹಾಗೂ ಯುವಜನರನ್ನು ಸಂಘಟಿಸುವ ಕುರಿತು ಚರ್ಚೆ ನಡೆಯಿತು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101